ಶಿವಾನುಭವ ಗ್ರಂಥಮಾಲಾ ನಂ॥ ೬

BL-B-64

# ವರದಾನಿ ಗುಡ್ಡಮ್ಮನ ಚರಿತ್ರೆಯು.

ಸಂಪಾದಕರು

ರಾ॥ ಸಾ॥ ಫ. ಗು. ಹಳಕಟ್ಟಿ

ಬಿ. ಎ. ಎಲ್. ಎಲ್. ಬಿ. ವಕೀಲರು.

ವಿಜಾಪುರ.

ಬೆಲೆ ೧

JUL 1955
982
2266

ಇದನ್ನು ವಿಜಾಪುರದಲ್ಲಿ ರಾ॥ ಸಾ॥ ಫ. ಗು. ಹಳಕಟ್ಟಿ ಇವರು ತಮ್ಮ
“ ಹಿತಚಿಂತಕ ಪ್ರಿಂಟಿಂಗ ಪ್ರೆಸ್ಸಿ ” ನಲ್ಲಿ ಮುದ್ರಿ[illegible]
ಮತ್ತು ಅವರು ವಿಜಾಪುರದಲ್ಲಿ ಉಪಲೀಬುರಜದ ಹತ್ತರ ತಮ್ಮ
೧೬೨೦ (ಅ) ನೇ ಮನೆಯಲ್ಲಿ ಪ್ರಕಟಿಸಿದರು.

ಕ್ರಮಾಂಕ
ಶಿವಬಸವ ನಗರ
ಬೆಳಗಾವಿ-೧೦
ನಾಗನೂರ ಶ್ರೀ ರುದ್ರಾಕ್ಷಿಮಠ

೭೩66

K 876

# ವರದಾನಿ ಗುಡ್ಡಮ್ಮನ

## ಚರಿತ್ರೆಯು.

ವಿಜಾಪುರ ಪಟ್ಟಣದ ವಾಯುವ್ಯ ದಿಕ್ಕಿಗೆ ೩೦ ಮೈಲುಗಳ ಮೇಲೆ ದಕ್ಷಿಣೋತ್ತರ ಒಂದು ಗುಡ್ಡದ ಸಾಲು ಹಬ್ಬಿರುವದು. ಈ ಸಾಲಿನ ದಕ್ಷಿಣ ಕೊನೆಯಲ್ಲಿ ಗುಡ್ಡಾಪುರವೆಂಬ ಗ್ರಾಮವಿದ್ದು, ಅಲ್ಲಿ ಒಂದು ಕ್ಷೇತ್ರ ಸ್ಥಾನವು ನೆಲಸಿರುವದು ಇದು ಈಗ ಜತ್ತ ಸಂಸ್ಥಾನಕ್ಕೆ ಒಳಪಟ್ಟಿರುತ್ತದೆ. ಈ ಸ್ಥಾನಕ್ಕೆ ಮಹಾರಾಷ್ಟ್ರ ಮತ್ತು ಕರ್ನಾಟಕ ಪ್ರಾಂತಗಳಿಂದ ಎಲ್ಲಜಾತಿಯ ಅಸಂಖ್ಯ ಯಾತ್ರಿಕರು ಇಡೀ ವರುಷ ಬರುವದುಂಟು ಈ ಕ್ಷೇತ್ರ ವುವರದಾನಿ ಗುಡ್ಡಮ್ಮನ ಸ್ಥಾನವಾಗಿರುತ್ತದೆ. ಇದಕ್ಕೆ ಜನರು ವಾಡಿಕೆಯಾಗಿ ಗುಡ್ಡಾಪುರದ ದಾನಮ್ಮನೆಂತಲೂ ಕರೆಯುವದುಂಟು. ಈಕೆಯು ಒಬ್ಬ ಶೂರ ಸ್ತ್ರೀಯಳು ಮತ್ತು ವೀರಶೈವ ಶಿವಶರಣೆಯು. ಈಕೆಯ ಚರಿತ್ರೆಯನ್ನು ವೀರಶೈವರಲ್ಲಿ ಪ್ರಸಿದ್ಧ ಕವಿಯಾದ ಲಕ್ಕಣ್ಣ ದಂಡೇಶನು ತನ್ನ ಶಿವತತ್ವ ಚಿಂತಾಮಣಿ ಎಂಬ ಗ್ರಂಥದಲ್ಲಿ ವಿವರಿಸಿದ್ದಾನೆ. ಈ ಭಾಗವನ್ನೇ ನಾವು ಈ ಸಂಚಿಕೆಯಲ್ಲಿ ಪ್ರಕಟಿಸಿದ್ದೇವೆ.

ಈ ವರದಾನಿ ಗುಡ್ಡಮ್ಮಯು ಶ್ರೀ ಬಸವೇಶ್ವರನ ಕಾಲದಲ್ಲಿ ಇದ್ದ ಹಾಗೆ ತೋರುತ್ತದೆ. ಈಕಾಲವೆಂದರೆ ಕರ್ನಾಟಕದಲ್ಲೆಲ್ಲ ಒಂದು ಪ್ರಚಂಡವಾದ ಧಾರ್ಮಿಕ ಜಾಗ್ರತೆಯನ್ನು ಹಬ್ಬಿಸಿದ ಕಾಲವು. ಈಜಾಗ್ರತೆಯ ಮೂಲಕ ಆಗ ಅಬಲೆಯರು ಸಹ ಮುಂದಾಗಿ ಧರ್ಮ ಪ್ರಸಾರದ ಕಾರ್ಯಗಳಲ್ಲಿ ಅಗ್ರಸ್ಥಾನವನ್ನು ವಹಿಸಿದರು. ಆ ಕಾಲಕ್ಕೆ ಅವರಲ್ಲಿ ಅನೇಕರು ಮಹಾದೇವಿಯಕ್ಕನಂತೆ ಜ್ಞಾನಿಗಳಾದರು ಮತ್ತು ಧಾರ್ಮಿಕ ಗ್ರಂಥಗಳನ್ನು ಬರೆದರು. ಅನೇಕರು ಸತ್ಯಕ್ಕ ಮುಕ್ತಾಯಕ್ಕಗಳಂತೆ ದೇವಭಕ್ತಿಯುತರಾಗಿ ಪರಮಾರ್ಥವನ್ನು ಗಳಿಸಿದರು. ಮತ್ತೆ ಕೆಲವರು ವೀರಭಕ್ತಿಯುತರಾಗಿ ವೀರಶೈವ ಧರ್ಮವನ್ನು ಪ್ರಸಾರಗೊಳಿಸಿದರು. ಹೀಗೆ ವೀರಭಕ್ತಿಯನ್ನು ತಾಳಿ ಪ್ರಸಿದ್ಧಿ ಹೊಂದಿದವರಲ್ಲಿ ವರ

ದಾನಿ ಗುಡ್ಡವ್ವೆಯು ಒಬ್ಬಳಾಗಿದ್ದಾಳೆ. ಹೀಗೆ ಯಾವ ಧರ್ಮದಲ್ಲಿ ಧಾರ್ಮಿಕ ವಿಚಾರಗಳು ಬಹುಜನ ಸಮಾಜದಲ್ಲಿ ರೂಢವಾಗಿ, ಪ್ರತಿಯೊಂದು ಮನೆಯನ್ನು ಪ್ರವೇಶಿಸಿ ಬಾಲಕರನ್ನೂ ಸ್ತ್ರೀಯರನ್ನೂ ಪ್ರೇರ ಣೆಗೊಳಿಸುತ್ತವೋ, ಅದೇ ಆಧರ್ಮದ ಜೀವಂತ ಕಾಲವು. ಇಂಥ ಸ್ಥಿತಿಯನ್ನು ವೀರಶೈವ ಧರ್ಮವು ಬಸವೇಶ್ವರನ ಕಾಲದಲ್ಲಿ ಹೊಂದಿತ್ತು. ಆದ್ದರಿಂದಲೇ ಆ ಕಾಲಕ್ಕೆ ಸ್ತ್ರೀಯರಲ್ಲಿಯೂ, ಬಾಲಕರಲ್ಲಿಯೂ ಬೇರೆಬೇರೆ ಜಾತಿಗಳಲ್ಲಿಯೂ ಅಸಂಖ್ಯ ಮಹಾಪುರುಷರು ಉದಯವಾದರು.

ಬಸವೇಶ್ವರನ ಕಾಲವಲ್ಲಿ ದೇಶದೊಳಗೆ ನಾನಾವಿಧ ಪಂಥಗಳು ತುಂಬಿ ಹೋದಹಾಗೆ ತೋರುತ್ತದೆ. ಶೈವ, ವೈಷ್ಣವ, ಬೌದ್ಧ, ಜೈನವೆಂಬ ನಾನಾವಿಧ ಮತಗಳು ದೇಶದಲ್ಲಿ ತುಂಬಿ ಹೋಗಿದ್ದವು. ಮತ್ತು ಈ ಪ್ರತಿಯೊಂದು ಮತದಲ್ಲಿಯೂ ಭೇದವಿಭೇದಗಳು ಉಂಟಾಗಿದ್ದವು. ಇವರೆಲ್ಲರಲ್ಲಿಯೂ ಪರಸ್ಪರ ಹೊಡೆದಾಟಗಳು ಎಡೆಬಿಡದೆ ನಡೆದಿದ್ದವು. ಪಾರಮೇಶ್ವರಾಗಮದಲ್ಲಿ ಈ ಮತಗಳ ಭೇದವಿಭೇದಗಳ ವರ್ಣನೆಯು ಕೆಲವುಮಟ್ಟಿಗೆ ಬಂದಿರುತ್ತದೆ. ಅದರ ಮೇಲಿಂದ ತಿಳಿಯುವವೇನಂದರೆ, ಆ ಕಾಲಕ್ಕೆ ಬೌದ್ಧ, ಸೌಗತ, ಚಾರ್ವಾಕ, ಜೈನ, ಅರ್ಹತವೆಂಬ ಭೇದಗಳಲ್ಲದೆ, ಶೈವ, ವೈಷ್ಣವ, ಶಾಕ್ತ, ಸೌರ, ವಿನಾಯಕ, ಕಾಪಾಲಿಕ ಮೊದಲಾದ ಮತ ಮತಾಂತರಗಳೂ ರೂಢವಾಗಿದ್ದವು. ಶೈವರಲ್ಲಿ ವೀರಶೈವ, ಮಹಾಶೈವ, ಮಿಶ್ರಶೈವ ಎಂಬ ಐದಾರು ಭೇದಗಳಿದ್ದವು. ಅಲ್ಲದೆ ಅವರಲ್ಲಿಯು ಉಪಾಸನೆಯ ದೇವತೆಗಳ ಪ್ರಕಾರ ಗಾಣಪತ್ಯ ವೈರಭದ್ರ್ಯ ಭೈರವ, ಶಾರಭ, ಕೌಮಾರ, ನಾಂದಿಕೇಶ, ಎಂಬ ಭೇದಗಳೂ ಉಂಟಾಗಿದ್ದವು. ಮತ್ತು ಈ ಪ್ರತಿಯೊಂದು ಭೇದದಲ್ಲಿ ಪುನಃ ೭।೮ ಭೇದಗಳು ಹುಟ್ಟಿದ್ದವು. ವೈಷ್ಣವರಲ್ಲಿ ಸಹ ಹೀಗೆಯೇ ಅವಸ್ಥೆಯಾಗಿತ್ತು. ಅವರಲ್ಲಿ ನಾರಸಿಂಹ, ಪಾಂಚರಾತ್ರ, ಗೋಪಾಲ, ಮೊದಲಾದ ಭೇದಗಳೂ, ಅಲ್ಲದೆ ಸೌರರಲ್ಲಿ ಆರು ಭೇದಗಳು, ಶಾಕ್ತರಲ್ಲಿ ನಾಲ್ಕು ಭೇದಗಳು, ಕಾಪಾಲಿಕರಲ್ಲಿ ನಾಲ್ಕು ಭೇದಗಳು, ಹೀಗೆ ಅನೇಕ ಭೇದಾಭೇದಗಳು ಆಗಿದ್ದವು. ಇದರ ಮೇಲಿಂದ ಆಗಿನ ಕಾಲದ ಸಮಾಜದಸ್ಥಿತಿಯನ್ನು ವಾಚಕರು ಊಹಿಸಬಹುದು. ಪೂರ್ವಕಾಲದ ವೇದೋಪನಿಷತ್ತುಗಳಲ್ಲಿ ಕಂಡುಬರುವ ಧರ್ಮದ ಶುದ್ಧ ಸ್ವರೂಪವು ಆಗ ಪೂರ್ಣವಾಗಿ ಹೊರಟು ಹೋಗಿತ್ತು. ಇದು ಆ ಕಾಲದ ಹಿಂದೂ ಧರ್ಮದ ಅವ

ನತ ಸ್ಥಿತಿಯನ್ನು ತೋರಿಸುತ್ತದೆ. ಈ ಅವ್ಯವಸ್ಥೆಯನ್ನು ಮೊದಲು ದೂರ ಮಾಡಲಿಕ್ಕೆ ಪ್ರಯತ್ನಿಸಿದವರು ಶಂಕರಾಚಾರ್ಯರು. ಅವರು ತಮ್ಮ ಬೋಧಾಶಕ್ತಿಯಿಂದ ಜನರನ್ನು ನಿಜವಾದ ವೇದಾಂತ ಮತಕ್ಕೆ ಹೊರಳಿಸಿದರು. ಆದರೆ ಅವರ ಪ್ರಯತ್ನಗಳ ಪರಿಣಾಮವು ಬಹು ಜನ ಸಮಾಜದ ಮೇಲೆ ವಿಶೇಷ ಆಗಲಿಲ್ಲೆಂದು ಕಂಡುಬರುತ್ತದೆ. ಯಾಕಂದರೆ ಅವರ ತತ್ವ ವಿಚಾರಗಳು ಬಹುಜನ ಸಮಾಜದ ತಿಳುವಳಿಕೆಗೆ ನಿಲುಕದಂಥವು ಇರುತ್ತವೆ. ಆದರೆ ಬಹುಜನ ಸಮಾಜದಲ್ಲಿ ಒಬ್ಬನೇ ದೇವರು ಮತ್ತು ಆತನು ಪರಬ್ರಹ್ಮ ವಸ್ತುವು ಎಂಬ ತಿಳುವಳಿಕೆಯನ್ನು ಹರವಿ, ಸಮಾಜದಲ್ಲಿ ಐಕ್ಯವನ್ನು ಹುಟ್ಟಿಸಿ, ನಿಜವಾದ ದೇವಭಕ್ತಿಯನ್ನುಸಮಾಜದಲ್ಲಿ ಹಬ್ಬಿಸಿದವರು ವೀರಶೈವರೇ ಇರುತ್ತಾರೆ. ಅವರ ಗ್ರಂಥಗಳಲ್ಲಿ ಒಬ್ಬನೇ ದೇವರೆಂಬ ವಿಚಾರಗಳು ಯಾವಾಗಲೂ ಪ್ರಸ್ತಾಪಿಸಲ್ಪಟ್ಟಿರುತ್ತವೆ. ಹೀಗೆ ವೀರಶೈವ ಧರ್ಮದ ಪೂರ್ವದ ಪ್ರವರ್ತಕರು ನಿಜವಾದ ವೇದಾಂತ ಮಾರ್ಗವನ್ನು ಸಮಾಜದಲ್ಲಿ ಪಸರಿಸಲು ಪ್ರಯತ್ನಬಟ್ಟವರಾಗಿರುತ್ತಾರೆ. ಇಂಥವರಲ್ಲಿ ವರದಾನಿ ಗುಡ್ಡಮ್ಮಳು ಒಬ್ಬಳಾಗಿದ್ದಾಳೆ.

ಈ ಸಂಚಿಕೆಯಲ್ಲಿ ಕೊಟ್ಟ ಗುಡ್ಡಮ್ಮನ ಚರಿತ್ರೆಯಿಂದ ತಿಳಿಯುವದೇನಂದರೆ, ಆಕೆಯು ಗುಡ್ಡಾಪುರದಲ್ಲಿದ್ದು, ಅಲ್ಲಿಂದ ಮೂವತ್ತು ಗಾವುದದಮೇಲೆ ಮಲಪ್ರಭಾನದಿಯ ದಂಡೆಯಲ್ಲಿ ಅಲಂಪುರವೆಂಬ ಗ್ರಾಮವು ಇರಲಾಗಿ, ಅಲ್ಲಿದ್ದ ಬ್ರಹ್ಮೇಶ್ವರ ಲಿಂಗವು ತನ್ನ ಸ್ಥಾನದಿಂದ ನದಿಯಲ್ಲಿ ಪರವಾದಿಗಳಿಂದ ಕಿತ್ತುಹಾಕಲ್ಪಡಲಾಗಿ, ಅಲ್ಲಿಯ ಭಕ್ತಶಿರೋಮಣಿಯಾದ ವೀರನಾಚಯ್ಯನು ವರದಾನಿ ಗುಡ್ಡಮ್ಮನ ಸಹಾಯವನ್ನು ಕೋರಿದನು. ಆಗ ಆಕೆಯು ಒಂದು ಸೈನ್ಯವನ್ನು ಕೂಡಿಸಿ, ಅಲಂಪುರವನ್ನು ಮುತ್ತಿ, ಪರವಾದಿಗಳನ್ನು ಜಯಿಸಿ, ಬ್ರಹ್ಮೇಶ್ವರ ಲಿಂಗವನ್ನು ಹೊಳೆಯಿಂದ ತೆಗೆದುಕೊಂಡು ಬಂದು, ಪುನಃ ಅದನ್ನು ಸ್ವಸ್ಥಾನದಲ್ಲಿ ನೆಲೆಗೊಳಿಸಿದಳೆಂದು ಈ ವರದಾನಿ ಗುಡ್ಡಮ್ಮನ ಚರಿತ್ರೆಯಿಂದ ತಿಳಿದು ಬರುತ್ತದೆ.

ಗುಡ್ಡಮ್ಮಳು ಪಾರ್ವತಿಯ ಅವತಾರಳೆಂದು ತಿಳಿಯಲ್ಪಟ್ಟಿರುತ್ತಾಳೆ. ಆಕೆಯ ಗುಡಿಯು ಗುಡ್ಡಾಪುರ ಗ್ರಾಮಕ್ಕೆ ಹೊಂದಿ ಇದ್ದು, ಅದು ಸುಂದರವಾದ ಗೋಪುರಗಳಿಂದ ಅಲಂಕೃತವಾಗಿದೆ. ಆಕೆಯ ಗುಡಿಯ ಹತ್ತಿರವೇ ಆಕೆಯ ಗುರುವಿನ ಪಾದುಕೆಗಳೂ, ಆವಾರದ ಪಶ್ಚಿಮ ದಿಕ್ಕಿನ ದೇವಾಲಯದಲ್ಲಿ ಶ್ರೀ ಸೋಮೇಶ್ವರ ಲಿಂಗದ ಮೂರ್ತಿಯೂ, ಅದರಂತೆಯೇ ವೀ

ರಭದ್ರನ ಗುಡಿಯೂ, ಮಲ್ಲಿಕಾರ್ಜುನನ ಗುಡಿಯೂ ಇರುತ್ತವೆ. ಆವಾರವು ೨೪೦ ಫೂಟು ಉದ್ದವಾಗಿಯೂ ೧೬೫ ಫೂಟು ಅಗಲಾಗಿಯೂ ಇರುತ್ತದೆ. ಈ ದೇವಾಲಯದ ಮುಂದಿನ ಭಾಗದಲ್ಲಿ ಒಂದು ದೊಡ್ಡ ಕನ್ನಡ ಶಿಲಾಲೇಖವು ಇದೆ. ಗುಡಿಯಸುತ್ತಲೂ ಯಾತ್ರಿಕರು ಇಳಿಯಲಿಕ್ಕೆ ಅನುಕೂಲವಾದ ಪೌಳಿಗಳಿವೆ. ದೇವಾಲಯದ ಯಾವತ್ತು ವ್ಯವಸ್ಥೆಯು ಜತ್ತ ಸಂಸ್ಥಾನದ ಕಡೆಗೆ ಇರುತ್ತದೆ.

ವರದಾನಿಗುಡ್ಡಮ್ಮನ ಚರಿತ್ರೆಯನ್ನು ಕವಿತೆಯಿಂದ ವರ್ಣಿಸಿದ ಗ್ರಂಥಕಾರನು ಲಕ್ಕಣ್ಣ ದಂಡೇಶನಾಗಿರುವನು. ಇವನು ೧೪೧೯ ರಿಂದ ೧೪೪೬ ರ ವರೆಗೆ ವಿಜಯನಗರದಲ್ಲಿ ಆಳಿದ ದೇವರಾಜನ ಸೇನಾನಾಯಕನಾಗಿದ್ದನು. ಆತನು ಶಿವತತ್ವ ಚಿಂತಾಮಣಿ ಎಂಬ ಗ್ರಂಥವನ್ನು ರಚಿಸಿದ್ದು, ಅದರಲ್ಲಿಯೇ ವರದಾನಿ ಗುಡ್ಡಮ್ಮನ ಈ ಚರಿತ್ರೆಯು ಅಡಕವಾಗಿದೆ.

ವರದಾನಿ ಗುಡ್ಡಮ್ಮನ ಚರಿತ್ರದ ಈ ಭಾಗವನ್ನು ಮಿ॥ ವೀರಭದ್ರಪ್ಪ ಬಸಪ್ಪ ಹಾಲಭಾವಿ ಬಿ. ಎ, ಎಲ್ ಎಲ್.. ಬಿ, ಫರ್ಸ್ಟಕ್ಲಾಸ್ ಸಬ್ ಜಜ್ಜ, ವಿಜಾಪುರ, ಇವರು ದೊರಕಿಸಿ ನಮ್ಮ ಕಡೆಗೆ ಕಳಿಸಿದ್ದಕ್ಕಾಗಿ ನಾವು ಅವರ ಆಭಾರಿಯಾಗಿದ್ದೇವೆ.

## ವರದಾನಿ ಗುಡ್ಡಮ್ಮನ ಚರಿತ್ರೆ.

ವರದಾನಿ ಗುಡ್ಡಮ್ಮ ಮೊದಲಾದ ಷೋಡಶರ ।
ಚರಿತಮಂ ಕೇಳ್ದು ಲಾಲಿಸಿ ಸಕಲ ಲೋಕದೊಳು ಕೃತ ಕೃತ್ಯರಾಗಿರ್ಪುದು ॥
ಭೃಂಗಿನಾಥನೆನಿಪ್ಪ ಗಣನಾಯಕಂ ನವರ ।
ಸಂಗಳಂ ಬಿಡುತಲಾ ಶಿವಪೂಜೆಗೈತಂದು ।
ಮಂಗಳಾಳಾಪದಿಂ ಪಾಡಿ ಪೊಗಳುತ ಶಿವನ ವಾಮ ಭಾಗವನೆ ಬಿಟ್ಟು ॥
ಹಿಂಗದೆ ಬಲವರಲು ಗಿರಿಜೆ ಮುಳಿದೆದ್ದಳಿಲೆ ।
ಭೃಂಗಿಪತಿ ಹಾಸಕವೆ ಎನ್ನೊಡನೆ ನೀನೆಮ್ಮ ।
ಹಂಗಿಗನಲಾ ಎನಲು ನಗುವ ಭೃಂಗೀಶ್ವರನ ಚರಣಾಂಬುಜಕ್ಕೆ ಶರಣೂ ॥೧॥
ರಸ ರುಧಿರಮಾಂಸಂಗಳೆಂಬ ಕೊಗ್ಗೆ ಸರಿನೊಳು ।
ಪಶುವಾಗಿ ಬಿದ್ದು ಹೊರಳುತ ಮನೋಜನ ಬಾಣ ।

## ವರದಾನಿ ಗುಡ್ಡಮ್ಮಯ ಚರಿತ್ರೆ

ದೆಸುಗೆಗೊಳಗಾಗಿ ಮಾಯೆಯ ಕಾಲ ತೊಡರಪ್ಪ ಜೀವರಂತಿಂದ್ಧಗೆ ಬರದಾ ॥
ಕೊಸರ್ವಡೆದುಕೋ ಎನುತ ಲೊಂದೇ ತಿರುಪಿನೊಳ್
ಶಿಸು ಮುದದಿ ನಿಂದು ನಿರುಪಾಧಿಕ ಜ್ಯೋತಿಯೆಂ ।
ತ್ರಿಸೆವಧಿಕಪದವಡೆದು ಮೆರೆದ ಭೃಂಗೀಶ್ವರನ ಚರಣಾಂಬುಜಕ್ಕೆ ಶರಣೂ ॥೨॥
ಏನೆನೆಲೆ ಗಿರಿಜೆ ನಿನ್ನಿಂದಧಿಕರೊಳು ನಿನ್ನ ।
ನೀನರಿಯದಿಂತು ನುಡಿವರೆ ನೀನು ದೇಹಾಭಿ ।
ಮಾನಿಯವರಂತರಂಗವನೋಡೆ ನಿರ್ದೇಹಿಗಳು ಅವರು ಭವರಹಿತರೂ ॥
ನೀನೆ ಪೇಳಿಮಗೆ ಮುನ್ನಿನ ನಿನ್ನ ಭವಮಾಲೆ ।
ಗಾನು ನೀನೇ ಸಾಕ್ಷಿ ನೀನವರೊಲಿವಿನಿಂ ।
ಮಾನವರೊಳುದಿಸಿ ಬಾ ಎಂದ ಗಿರಿಜಾ ವರನ ಚರಣಾಂಬುಜಕ್ಕೆ ಶರಣು ॥೩॥
ಉನ್ನತಿಕೆ ಬಡೆದು ಕಿರಿದರ ಹಂಗ ಹಂಗಿಸುವು।
ದುನ್ನತಿಕೆ ಗೆಡಿಸದಿಹುದೇ ನಿನ್ನ ನನ್ನಿಯು।
ದುನ್ನತಿಕೆಗೆಟ್ಟು ಕಿರಿದನಾಡಿದೆ ನೀನಿನ್ನು ಗುಡ್ಡಾಯಿ ಎಂಬಳಾಗಿ॥
ನಿನ್ನ ಜವ್ವನ ಬಲ್ಪಿನಿಮ್ಮಾನ ವಿರುತವೆನ।
ಗನ್ಯವಂ ಬಗೆಧ ಸಮಯ ದ್ರೋಹಿಗಳನರಸು।
ಎನ್ನ ನೆಲೆಗೊಳಿಸು ಹೋಗೆಂಬ ಗಿರಿಜಾವರನ ಚರಣಾಂಬುಜಕ್ಕೆ ಶರಣು॥೪॥
ಎನ್ನ ನೆಲೆಗೆಟ್ಟು ಮಾನವ ಲೋಕದೋಳ್ಪುಟ್ಟಿ।
ನಿನ್ನನಗಲುವ ಬನ್ನವೆನಗಾದುದ ನರಿದು।
ನನಗೆ ನಾಮೂದಲಿಸಿ ಕೊಳಬೇಕೆನುತ್ತ ನುಡಿದಪರಾಡಿದುದು ತಥ್ಯವೇ॥
ಚನ್ನೆಯಿಂತೆನ್ನದಿರು ನೀನಿಲ್ಲದಿರ್ದಲ್ಲಿ।
ಎನ್ನನಾರ್ಬಲ್ಲರೆಲೆ ಶರ್ವಾಣಿ ತಿಳಿ ನಿನ್ನ।
ಬನ್ನವೆನ್ನದು ನಂಬಿರೆಂದ ಗಿರಿಜಾವರನ ಚರಣಾಂಬುಜಕೆ ಶರಣು ॥೫॥
ವಾಮಲೋಚನೆ ಹೋಗು ಗುಡ್ಡಾಪುರದೆ ನಿನ್ನ।
ಸೋಮಸಾಮ್ಯದ ರೂಹು ರಚಿಸಿ ಮರ್ತ್ಯದೊಳಗೆ ಮ।
ನೋಮುದದೊಳೀಕ್ಷಿಸಲ್ ಜನಿಸು ಹೋಗಲ್ಲಿ ಸೋಮೇಶಲಿಂಗಾಲಯವದೆ॥
ಸೋಮ ಕಳೆಗಳು ಬೆಳೆವ ತೆರದೆ ಗಳಗಳನೆ ಬೆಳ।
ದಾಮಹಾಲಿಂಗ ಸೇವೆಯೊಳೆ ನೀನಲ್ಲಿರು।
ಪ್ರೇಮದಿಂದಪ್ಪಿ ಹೋಗೆಂದ ಗಿರಿಜಾವರನ ಚರಣಾಂಬುಜಕ್ಕೆ ಶರಣು॥೬॥
ಇತ್ತಲಾ ಗಿರಿಜೆ ಭೃಂಗಿಗೆ ಮುಳಿದ ದೋಷದಿಂ।

ಚಿತ್ತಜಾರಿಯ ಶಾಪಮಂ ಪಡೆದು ಮರ್ತ್ಯಕ್ಕೆ।
ಇತ್ತು ಗುಡ್ಡಾಪುರದ ಸೋಮೇಶಲಿಂಗ ಭಕ್ತರ ಗರ್ಭದಲ್ಲಿ ಜನಿಸಿ।।
ಉತ್ತಮದ ಯವ್ವನಂ ಬಪ್ಪನ್ನೆಗಂ ಶಿವನ।
ನತ್ಯರ್ಥದಿಂದಾವಗಂ ಪೂಜಿಸುತ್ತ ಕೊ।
ಳುತ್ತಿರಂ ಗುಡ್ಡ ವರದಾನಿ ಗುಡ್ಡಮ್ಮಗಳ ಚರಣಾಂಬುಜಕ್ಕೆ ಶರಣು ।।೭।।
ಅತ್ತ ಗುಡ್ಡಾಪುರಕೆ ಮೂಡುಗಡೆಯೊಳು ಮೂ।
ವತ್ತು ಗಾವುದವಲಂಪುರವದರೊಳಿಪ್ಪುದೊಂ।
ದುತ್ತಮಂ ಬ್ರಹ್ಮೇಶಲಿಂಗವದನೆ ಧೂರ್ತರೆತ್ತಿ ಹೊಳೆಯಲ್ಲಿ ಇಟ್ಟು।।
ಮತ್ತಿರದೆಯಾಪೀಠದಲ್ಲಿ ನಾರಾಯಣನ।
ನೆತ್ತಿಸಲು ಕಂಡು ಮರುಗುತ್ತಲನ್ನವ ತೊರೆದ।
ಸತ್ಯಸದ್ವ್ರತವಿರತ ವೀರನಾಚಯ್ಯಗಳ ಚರಣಾಂಬುಜಕ್ಕೆ ಶರಣು ।।೮।।
ಗೋಚರಿಸಿ ಕರುಣದಿಂ ಬ್ರಹ್ಮೇಶ್ವರಂ ವೀರ।
ನಾಚಯ್ಯಗಳ ಕನಸಿನೋಳ್ಬಂದು ಈ ನೆರೆದ।
ನೀಚರಂ ಪರಿಹರಿಪ ಬುದ್ಧಿಯಂ ಪೇಳ್ವೆನೇಳೆಂದೆತ್ತಿ ಭಸಿತವಿಟ್ಟೂ।।
ವಾಚಿಸದೆ ಗುಡ್ಡಾಪುರಕೆ ಹೋಗಿ ನಮ್ಮರಸಿ।
ಯಾ ಚಂದ್ರವದನೆ ವರದಾನಿಗೊಂದೇ ಮಾತ।
ಸೂಚಿಸೆನೆ ನಮಿಸುತೆಚ್ಚತ್ತ ನಾಚಯ್ಯಗಳ ಚರಣಾಂಬುಜಕ್ಕೆ ಶರಣು ।।೯।।
ಆ ಕ್ಷಣದಿ ಬದುಕಿದೆನೆನುತ್ತೆ ಭುಜವ್ವೈದು ಭಾ।
ಳಾಕ್ಷನರುಪಿದ ಕರುಣಮಂ ಮನದೊಳಳವಡಿಸಿ।
ಪಕ್ಷಿವೇಗದೊಳು ಗುಡ್ಡಾಪುರಕ್ಕೈದಿ ಗುಡ್ಡಮ್ಮಗಳ ಸವದಿ ಪೊರಳೆ।।
ಈಕ್ಷಿಸುತ ಬಂದ ಕಾರ್ಯವನಾತನಿಂಗಿತದ।
ಲೀಕ್ಷಿಸುತಲಭಯವೀವುತ್ತಲಾತನ ವ್ರತವ।
ಪೇಕ್ಷಿತವರಸಿಕೊಂಡುನುಡಿವಗುಡ್ಡಮ್ಮಗಳ ಚರಣಾಂಬುಜಕ್ಕೆ ಶರಣು।।೧೦।।
ಏನು ಬಿಜಯಂಗೈದಿರಯ್ಯ ನಾಚಯ್ಯಗಳೆ।
ಏನು ಸೇವೆಯನೆನಗೆ ಕರುಣಿಸಲ್ಬಂದಿರೆನು।
ತಾನಂದರಸದ ತೆರೆ ಮಸಗೆ ಕರುಣಾರಸವಿ ಕಂಗಳುಂ ಕೋಡಿವರಿಯೇ।।
ಮಾನನಿಧಿ ಗುಡ್ಡಮ್ಮೆ ಬೆಸಗೊಳಲು ಕೈಮುಗಿವು।
ತಾನತಾನನನಾಗಿ ಜಗನ್ಮಾತೆ ಸುಜ್ಞಾನ।
ಮಾನಸೀಯೆಂದುಮಿಗೆಪೊಗಳ್ವನಾಚಯ್ಯಗಳಚರಣಾಂಬುಜಕ್ಕೆಶರಣು ।।೧೧

ಜಗವೆಲ್ಲವಂ ಪುಟ್ಟಿಸಲು ಜನನಿಯಾಗಿಯಾ।
ಜಗದ ಜೀವರ ಯಂತ್ರ ಸೂತ್ರವುಂ ನೀನಾಗಿ।
ಜಗದ ಸಂಹಾರ ತಾಂಡವ ಮೂರ್ತಿಯಾಗಿರ್ಪ ನಿನ್ನ ನಿಜವಪುವುದಳವೇ॥
ಜಗದಿಂದಲತ್ತತ್ತಲಾರುವರಿಯದ ಶಿವನ।
ಮೊಗದ ಕನ್ನಡಿಯೆ ಆತನೆ ನಿನ್ನ ಬಲ್ಲನೆನೆ॥
ನಗುವಮಹಾದೇವನರ್ಧಾಂಗಿಗುಡ್ಡಮ್ಮಗಳ ಚರಣಾಂಬುಜಕ್ಕೈಶರಣು॥೧೨॥
ಆಡಿಸುವ ಸೂತ್ರಧಾರಿಯುನರಿದು ಎನ್ನ ಕೊಂ।
ಡಾಡುವರೆ ತಂದೆ ಜಗವಾರ ಜಠರದೊಳಿಪ್ಪ।
ದಾಡುವರು ದಾರುವಾಡಿಪರಾರು ಉಭಯುಮುಂನೋಡಿಮೆಚ್ಚಿಪರದಾರೂ॥
ಬೀಡು ಬಿಟ್ಟವೆ ಎಂಟು ದೆಸೆಯೊಳಿಂಟಂಗವಿವ।
ಮಾಡಿದವರಾರೆಂಬುದನು ಶರಣರೇ ಬಲ್ಲ।
ರಾಡಲೇಂನಿಮ್ಮೊಡನೆ ಎಂದ ಗುಡ್ಡಮ್ಮಗಳ ಚರಣಾಂಬುಜಕ್ಕೆ ಶರಣು॥೧೩॥
ಹರನ ಕರುಣವೆ ಮೂರ್ತಿಯಾಗಿ ಬಂದಿರೊ ಎನ್ನ।
ನರಜನ್ಮವಂ ಹಿಂಗಿಸಲ್ಬಂದಿರೋ ಜನ್ಮ।
ಪುರುಷಾರ್ಥ ಸಿದ್ಧಿಗೊದಗಿದುದೆನಿಸಬಂದಿರೋ ಎನ್ನ ಜವ್ವನವನದೊಳು॥
ಚರಿಸುವ ವಸಂತ ನಲ್ಲನ ತೋರ ಬಂದಿರೋ।
ವರಗುಚಿತವಾದ ಕನ್ನಿಕೆ ಯೆನಿಸ ಬಂದಿರೊ।
ಕರುಣಿಸುವುದೆಂದ ಗುಡ್ಡವ್ವೆಗಳ ವರವರದ ಚರಣಾಂಬುಜಕ್ಕೈಶರಣು॥೧೪॥
ಹೇಳಿದುದನರಿವುತಿಹುದೆಲ್ಲ ಜೀವರಿಗುಂಟು।
ಹೇಳದುದನರಿವರಿವ ನಿಲವೆವುಂ ನೀನಾದ।
ಭಾಳಲೋಚನನ ಚಿಚ್ಛಕ್ತಿ ನಿನಗಿನ್ನದಂ ಪೇಳಲೇನಾ ಕಥನವಾ॥
ಆಳಿದಳೆ ಬಿನ್ನಪಂ ಬಾಲ ಬ್ರಹ್ಮೇಶ್ವರನ।
ಊಳಿಗವನೆಲ್ಲವಂ ತಿಳುಪೆ ಭುಗಿಲಿಡುತಿದ್ದ।
ಮೇಳದ ಗಣಂಗಳಂ ಕರೆದ ಗುಡ್ಡಮ್ಮಗಳ ಚರಣಾಂಬುಜಕ್ಕೆ ಶರಣು॥೧೫॥
ಎನ್ನ ಜವ್ವನ ನಿರರ್ಥಕವೆನಿಸ ದಾಯ್ತೆಂದು।
ಹೊನ್ನಯ್ಯ ಬಾ ಪಾಂಡ್ಯ ನಾಯಕಂ ಕರೆ ಬನ್ನಿ।
ಕಿನ್ನರಿಯ ಬ್ರಹ್ಮಯ್ಯ ಬಾ ಬೀರಿದೇವ ಬಿಜ್ಜಯ್ಯಗಳು ಕೂಡಿ ಬನ್ನೀ॥
ಸನ್ನದ್ಧನಾಗಿ ನಿಜಶರಣ ಸೋಮಯ್ಯ ಬಾ।
ಮನ್ನಣೆಯ ಕಾಳಯ್ಯ ಕೇಳ್ ತಮ್ಮಗಳೆ ನೀವು।

ಬನ್ನಿ ಎಂದೆನುತ ವಂದಿಸಿದ ಗುಡ್ಡವ್ವಗಳ ಚರಣಾಂಬುಜಕ್ಕೆ ಶರಣು ॥೧೬॥
ನಂದಿಮುಖ ಬನ್ನಿ ಕೃಪೆಯಿಂದ ಹೆಂದಯ್ಯ ಬಾ ।
ಕಂದರ್ಪನಜಯ ಕಲ್ಯಾಣ ಬಾಚಯ್ಯ ಬಾ ।
ಒಂದೆ ಮಾನಸನಾಗಿ ರೇವಯ್ಯ ಬಾ ಮುಂದೆ ನೀನು ನಡೆ ಸೈನ್ಯನಾಥಾ ॥
ಹಿಂದೆ ಸಿಕ್ಕದಿರು ಚಿಕ್ಕಲಿಗೆಯ ನಾಗಯ್ಯ ।
ಚಿಕದಾಗಿ ಬನ್ನಿ ದೇವರ ಬಾಚಿ ತಂದೆಗಳೆ ।
ಎಂದು ದೇವರಬಾಚಿಗುಸುರ್ದ ಗುಡ್ಡವ್ವಗಳಚರಣಾಂಬುಜಕ್ಕೆಶರಣು॥೧೭॥
ವಾಚಾಮಗೋಚರನೆನಿಪ್ಪ ಶೈವಾನುಭವ ।
ನಾಚಿದೇವಯ್ಯನಂ ಕರೆದು ತನ್ನಯ ಶಿರವ ।
ಚಾಚುತಲಲಂಪುರದ ಭಕ್ತ ಜನಕೆಲ್ಲ ವಿಭೂತಿ ಇತ್ತವರು ಸಹಿತ ॥
ಆ ಚತುರ್ಗ್ರಾಮದೊಳಗಣ ಶಿವನ ಭಕ್ತರ್ಗೆ ।
ಸೂಚಿಸುತಲಂಪುರದ ಹೊರವಳೆಯುವನು ಬಿಟ್ಟು ।
ಗೋಚರಿಸಿರೆಂದು ವಂದಿಸಿದ ಗುಡ್ಡವ್ವಗಳ ಚರಣಾಂಬುಜಕ್ಕೆ ಶರಣು॥೧೮॥
ಅತ್ತಲಾತನ ಕಳುಹಿ ಗಣಮೇಳದೊಳಗೆ ನಲಿ ।
ವುತ್ತ ಮಾದಲಿಸಿ ಮುದ್ದಿಸುತ ಮೋಹಿಸುತ ನಮಿ ।
ಸುತ್ತ ಪುಳುಕಿಸುತಲಾಡುತ್ತ ಹಿರಿ ಹಿಗ್ಗುತ್ತ ಹದಿನಾರು ರಥವ ತರಿಸಿ॥
ಎತ್ತಿಸುತ ಬಿರುದ ಪತಾಕೆಗಳ ಶರಣರಸು ।
ಕೀರ್ತಿಗಳ ಬಿರುದ ನುಡಿಸುತಿರೆ ರಥವನೇ ।
ರುತ್ತಲಂಪುರಕೆ ದಾಳಿಟ್ಟ ಗುಡ್ಡವ್ವಗಳ ಚರಣಾಂಬುಜಕ್ಕೆ ಶರಣು ॥೧೯॥
ಮೃಡನ ನಡುಗಣ್ಣ ಕೋಪದ ಕಿಡಿಯ ಬೆಳಗವೋ ।
ಕಡೆಗಾಲದಂದು ಸಂಹರಿಪ ರುದ್ರನ ಸರ್ವ ।
ಪಡೆಯೊ ದಕ್ಷಾರಧ್ವಧ್ವಂಸ ವೀರೇಶ್ವರನ ವೀರಗಣ ಪರಿವಾರವೋ ॥
ಖಡುಗ ತೋಮರ ಪರಶು ಚಕ್ರ ಧನು ಶರ ಮುಸಲ ।
ಜಡಿವ ಪತ್ರದ ಪಟಾಹದ ವೀರ ಭಟಕೋಟಿ ।
ನಡೆದುದಾಳಿಡಲು ನಗುನಗುವಗುಡ್ಡವ್ವಗಳ ಚರಣಾಂಬುಜಕ್ಕೆಶರಣು॥೨೦॥
ಶಿವನಲ್ಲದನ್ಯ ಮುಂಟೆಂಬರ್ಗೆ ಎದೆಶೂಲಿ ।
ಶಿವನಿಂದಕರನೊತ್ತಿ ಕೊರೆವ ಮೂಗಿನ ಕತ್ತಿ ।
ಶಿವಮಾರ್ಗ ಕಂಟಕರ ಪರ್ವತಕೆ ಕುಲಿಶವಾ ಶಿವ ಸಮಯ ಕಮಲಮಿತ್ರಾ॥
ಶಿವಲಾಂಛನದ ವಿರೋಧಿಯ ವಂಶದಾವಾಗ್ನಿ ।

ವಾಚನಾಲಯ

## ವರದಾನಿ ಗುಡ್ಡವ್ಮೆಯ ಚರಿತ್ರೆ.

ಶಿವಸುಪ್ರಸಾದ ವಿರಹಿತ ಶರಧಿ ಬಡಬಾಗ್ನಿ।
ಯವತರಿಸಿಬಂದುದೋ ಎನಿಪಗುಡ್ಡಮ್ಮಗಳಚರಣಾಂಬುಜಕ್ಕೆಶರಣು॥೨೧॥

ಕುಮತಂಗಳೆಂಬ ಕುಮುದಾಕರಂ ಮುದ್ರಿಸಲು।
ಸ್ವಮತಂಗಳೆಂಬ ಕಮಲಾಕರಂ ನಲಿವುತಿರೆ।
ಸುಮನಸ್ಕರತುಳ ಚಿಂತಾತಮಂ ಪಿಂಗೆ ಶಿವಯೋಗಿಚಕ್ರಂ ಕುಣಿಯಲು॥
ವಿಮಳ ಶಿವಧರ್ಮ ಪೂರ್ವಾಚಲದ ಶಿಖರದೊಳು।
ರಮಣೀಯಶ್ಶೈವತೇಜೊಭಾನು ಮಂಡಲದ।
ಸಮುದಯವಿದೆನಿಪಮಣಿರಥದಗುಡ್ಡಮ್ಮಗಳಚರಣಾಂಬುಜಕ್ಕೆಶರಣು॥೨೨॥

ಮೇರೆದಪ್ಪಿದ ಸುಧಾ ಜಲಧಿ ತೆರೆಮಸಗಿತೆನೆ।
ವೀರನಾಚಯ್ಯ ಮೊದಲಾದ ಶಿವಗಣವಲಂ।
ಪುರಪೊರಗಣದವನದಪುಷ್ಪವಾಟಿಯೊಳುಬೀಡಂಬಿಟ್ಟುಸುಖದೊಳಿರುತಾ॥
ಭೋರೆಂಬ ವೀರಗಹಳೆಗಳ ರಣ ಮೋಹರೆಯ।
ಭೇರಿನಿಸ್ಸಾಳಧ್ವನಿ ಮೊಳಗುತಂ ಬರುತಿರಲು।
ವೀರ ಗುಡ್ಡಮ್ಮ ಬಿನದರಿದ ನಾಚಯ್ಯಗಳ ಚರಣಾಂಬುಜಕ್ಕೆ ಶರಣು ॥೨೩॥

ಬರುತ್ತಿವಳೆಮ್ಮ ನಿಜಪತಿಯು ಬ್ರಹ್ಮೇಶ್ವರನ।
ಹರಿಬಮಂ ತೆಗೆಯಬೇಕೆನುತ ನೀವೆಲ್ಲರುಂ।
ಪರಮಾನುರಾಗದಿಂ ಗುಡಿಗಟ್ಟಿ ಕಳಶ ಕನ್ನಡಿ ಮಂಗಳಾರುತಿಗಳಾ॥
ತರತರದಿ ಪಿಡಿದು ಪಾಡುತ ನೃತ್ಯವಾದ್ಯದಿಂ।
ವರಕುಸುಮ ವರುಷದಿಂದಿದಿರ್ಗೊಂಬ ವೇಳೆ ಶಿವ।
ಶರಣರೆಲ್ಲರು ನಡೆದರೆಂಬ ನಾಚಯ್ಯಗಳ ಚರಣಾಂಬಜಕ್ಕೆ ಶರಣು ॥೨೪॥

ವರ ಮಂಗಳೋಪಕರಣಂಗಳಂ ತತ್ ಕ್ಷಣದಿ।
ತರಿಸಿ ಪರಮೋತ್ಸವಂಗಳಿನೆಲ್ಲ ದೆಸೆದೆಸೆಗೆ।
ನೆರಪಿ ನಡೆ ಕೈಲಾಸವಾಗಿ ಪೊಡಮಡುತಿರಲು ಮುಂದೆ ನಾನಾವಿಭವದಿ॥
ಬರುತಿರ್ಪಳಮಮ ರವಿಬಿಂಬ ಫಲವಾದಂತೆ।
ಧರೆಗತಿ ವಿಚಿತ್ರವಹ ರನ್ನರಥ ಪದಿನಾರು।
ತರಿಸಿಪರಿತಂದುಮುಂದಿರ್ದಗುಡ್ಡಮ್ಮಗಳ ಚರಣಾಂಬುಜಕ್ಕೆ ಶರಣು ॥೨೫॥

ಕುರುಡಂಗೆ ಕಂಗಳೈತಪ್ಪಂತೆ ನಿರ್ಭಾಗ್ಯ।
ನರರ್ಗೆ ಪರಮೈಶ್ವರ್ಯ ಬಂದಂತೆ ಪಸಿದರ್ಗೆ।
ಪರಮಾನ್ನ ದೊರಕಿದಂತಾಯ್ತು ನಿಮ್ಮಯ ಬರವಿದೆಮ್ಮ ಸದ್ಭಕ್ತತತಿಗೆ ॥

ನಿರವದ್ಯ ನಿರುಪಾಧಿ ನಿಶ್ಚಿಂತ ವರದೇವ ।
ಪರಿವಾದಿಗಳಿಗಂಜೆವಂಜೆವೆನುತೆಲ್ಲರುಂ ।
ಶರಣೆನುತ್ತಿರಲಭಯವಿತ್ತ ಗುಡ್ಡಮ್ಮಗಳ ಚರಣಾಂಬುಜಕ್ಕೆ ಶರಣು ॥೨೬॥
ರವಿ ಮಂಡಲವ ನೋಡುತಂಜಿ ಯಡಗುವ ಘೂಕ ।
ನಿವಹದಂತಲ್ಲಲ್ಲಿ ಯಡಗುತಂ ಪ್ರಾಣಗಳು ।
ತವೆ ಸಂಚಲಿಸೆ ಕಂಗೆಟ್ಟು ಕಾತರಿಸಿ ಕಳವಳಿಸುತಂ ಶಿವದ್ರೋಹರು ||
ಇವರು ಎಲ್ಲಿಂದೆಲ್ಲಿ ಗೈತಂದರಿವರಪರಿ ।
ಭುವನಕಚ್ಚರಿಯೆನುತ ನಡೆನೋಡಿ ಬೆರಗಾಗಿ ।
ಜವಗುಂದಿಸೈಗೆಡೆಯೆನಗುವಗುಡ್ಡಮ್ಮಗಳ ಚರಣಾಂಬುಜಕ್ಕೆ ಶರಣು ॥೨೭॥
ಶರಭಂಗೆ ಹರಿಕಟಕ ವೋಡುವಂದದಿ ಮಹಾ ।
ಗರುಡಂಗೆ ಯುರಗನಿಕರಂ ತೆರಳುವಂತೆ ಕೇ ॥
ಸರಿಗೆ ಕರಿಘಟೆಗಳಳಿವಂತೆ ತಮ್ಮಿಂದತಾವೇ ಜರ್ಜರಿತರಾಗುತಾ ॥
ಧರೆಯು ಬಾಯ್ದೆರೆಯದೆಯೆನುತ್ತ ಪರವಾದಿಗಳು ।
ನೆರೆದು ನಾರಾಯಣನ ಕೂಡೋಡೆ ವಾರಣವೆನು ।
ತಿರುತಿರಲು ಕೇಳ್ದುನಸುನಗುವಗುಡ್ಡಮ್ಮಗಳಚರಣಾಂಬುಜಕ್ಕೆಶರಣು ||೨೮॥
ಏನಯ್ಯ ನಾಚಯ್ಯ ನಿಮ್ಮ ಮನದಭಿಮತವ
ದೇನು ಮೊದಲಲೆ ಲಿಂಗವುಂ ಪ್ರತಿಷ್ಠಿಸಿರೊ ಪೇ ।
ಳಾ ನೀಚರಂ ಪರಿಹರಿಸಿದ ಬಳಿಕದೋ ಎನಲು ಲಿಂಗವೆ ಮುಖ್ಯವು ॥
ಆ ನಿತ್ಯ ಲಿಂಗವೇ ಸುಪ್ರತಿಷ್ಠಿತವಾಗೆ ।
ತಾನೆ ತೊಲಗುಗು ವೃಜಿನವೆಂದೆನಲು ಮೆಚ್ಚಿಸು ।
ವ್ಯಾನದೆಮಹಾನದಿಗೆನಡೆದ ಗುಡ್ಡಮ್ಮಗಳಚರಣಾಂಬುಜಕ್ಕೆ ಶರಣು ॥೨೯॥
ಶಿವಶರಣರೆಲ್ಲರ್ಗೆ ಶರಣಾರ್ಥಿ ನೀವೆಲ್ಲ ।
ತವಕದಿಂ ಪೋಗಿ ನಿಜಭವನ ಭವನಂಗಳಲಿ ।
ಭುವನವೆಲ್ಲರಿವಂತೆ ಗುಡಿ ತೋರಣಂಗಟ್ಟಿ ವಾದ್ಯಂಗಳಂ ಮೊಳಗಿಸೀ ॥
ಧವಳಮಂ ಪಿಡಿಸುತ ಕಳಸ ಕನ್ನಡಿಗಳಿಂ ।
ನವರತ್ನದಾರುತಿಗಳಿಂದಮುತ್ತೈದೆಯರ ।
ನಿವಹ ಸಹಿತಿದಿರ್ವನ್ನಿಯಂದ ಗುಡ್ಡಮ್ಮಗಳಚರಣಾಂಬುಜಕ್ಕೆ ಶರಣು ||೩೦॥
ನೆನೆವ ಮಂತ್ರದಿ ತನ್ನಗಣಮೇಳಸಹಿತ ನಡೆ ।
ದನುಪಮ ಬ್ರಹ್ಮೇಶ್ವರನಿಂಬುಗೊಂಡು ಪಾ ।

ವನ ಚರಿತೆಯೆನಿಸುವ ಮಲಪ್ರಹಾರಿಯ ತೀರದಲ್ಲಿ ರಥದಿಂದಿಳಿವುತಾ ॥
ಅನಿಮಿಷಾಧೀಶನಂ ನೆನೆದಖಿಳ ಭಾವಮಂ ।
ಮನವಾರೆ ತರಿಸಿ ಸುರದುಂದುಭಿಗಳ್ಮೊಳಗೆ ಸುರ ।
ವನಿತೆಯರುಸಹಿತ ನಿಂದಿರ್ದಗುಡ್ಡಮ್ಮಗಳಚರಣಾಂಬುಜಕ್ಕೆ ಶರಣು ॥೩೧॥
ಪರಮ ಸೌಭಾಗ್ಯನಿಧಿ ಸರ್ವಮಂಗಳೆಯೆನಿಪ ।
ವರದಾನಿ ಗುಡ್ಡಮ್ಮನಂ ಕಾಣುತಂ ಗಂಗೆ ।
ಪರಿತಂದುಚರಣಾಬ್ಜಮಂ ತೊಳೆದು ರತ್ನಸ್ಫುರಿತಪಾವುಗೆಗಳನಿರಿಸೀ ॥
ಇರದೆ ಕೈಗೊಟ್ಟು ತದ್ಭ್ರಮ್ಹೇಶ್ವರನ ತೋರೆ।
ಹರಿಣಾಂಕನಂ ಕಂಡ ಚಂದ್ರಕಾಂತದ ತೆರದಿ ।
ಕರಗಿಕಂಗಳಧಾರೆವರಿವಗುಡ್ಡಮ್ಮಗಳಚರಣಾಂಬುಜಕ್ಕೆ ಶರಣು ॥೩೨॥
ನೆರೆವಸಂತನ ಕಂಡ ವನದೇವಿಯಂತೆ ಯಂ ।
ಕುರಿಸಿತನು ಪುಳಕಾಳಿಗಳು ಸುಧಾ ಜಲಧಿಯೊಳು ।
ಶರಿರವಂ ಮುಳುಗಿಎದ್ದಂತೆ ಗದಗದಿಸಿ ಮಲಯಾನಿಲಗೆ ಚಂದನಲತೆ ॥
ಹರುಷದಿಂ ಕಂಪಿಸುವ ತೆರದಿ ಕಂಪನದಿ ಚೀ ।
ತ್ಕರದಿಂದ ಪೆಣ್ದುಂಬಿ ಜಿನಗುವಂದದಿ ಪಾಡಿ ।
ಪರತರ ಬ್ರಹ್ಮಜಯ ಎಂದ ಗುಡ್ಡಮ್ಮಗಳ ಚರಣಾಂಬುಜಕ್ಕೆ ಶರಣು ॥೩೩॥
ಭರದಿಂದ ಸಾಷ್ಟಾಂಗ ದಂಡ ಪ್ರಣಾಮಮಂ ।
ಪರಮಾನುರಾಗದಿಂ ಮಾಡಿ ಕೈಮುಗಿದೆದ್ದು ।
ಸುರಧೇನು ಸುರತರುಗಳಂ ತರಿಸುತಂ ಫಲರಸದೊಳಭಿಷೇಕಮಾಡೀ ॥
ವರಸುಗಂಧಾನು ಲೇಪನದೊಡನೆ ಪರಿಮಳಿಪ ।
ಬಿರಿ ಮುಗುಳ ಮಂದಾರ ಮಾಲೆಯಂ ಪಿಡಿದೆತ್ತಿ ।
ಪರಸುತಂಬ್ರಹ್ಮೇಶಗಿತ್ತ ಗುಡ್ಡಮ್ಮಗಳ ಚರಣಾಂಬುಜಕ್ಕೆ ಶರಣು ॥೩೪॥
ವರ ಗುಗ್ಗಳದ ದಿವ್ಯಧೂಪ ಗಂಧಂ ಜಗ ।
ದ್ಭರಿತವಾಗೆಸೆಯೆ ರತ್ನಜ್ಯೋತಿಗಳ ಸುತ್ತಿ ।
ಪರಿವೇಷ್ಟಿಸಲು ಭಕ್ತಿರಸಗಳೊದವಿದ ಪರಾನಂದ ನೈವೇದ್ಯವಿತ್ತೂ ॥
ಸರಸ ಕರ್ಪೂರ ತಾಂಬೂಲವಿತ್ತುಪಚರಿಸಿ ।
ಪರಮ ಸಾಮ್ರಾಜ್ಯ ಸುಖದಿಂ ನಿತ್ಯನಾಗೆಂದು ।
ಪರಿಸಿಶೇಷಾಕ್ಷತೆಯನಿತ್ತ ಗುಡ್ಡಮ್ಮಗಳ ಚರಣಾಂಬುಜಕ್ಕೆ ಶರಣು ॥೩೫॥
ದೇವ ಸರ್ವಜ್ಞ ಸರ್ವೇಶ ಸರ್ವಾಧಾರ ।

ನೀವಿಲ್ಲಿ ನಿಃಕಾರಣಂ ಪ್ರವಾಸದೊಳಿರ್ಪುದ ।
ದಾವುದು ನಿಜಸ್ಥಾನಕೊಲಿದು ಬಿಜಯಂಗೈದು ಭಕ್ತರ ಮನೋರಥವನು॥
ಈವುದೇಕಾರ್ಯ ಚಿತ್ತೈಸಬೇಕೆಂದು ಪಿಡಿ ।
ದೋವಿ ಪುಷ್ಪಕಕೆ ಬಿಜಯಂಗೈಸುತತಿ ಸುಖವ॥
ನೀವಲಂಪುರಿಗೆ ಬರುತಿರ್ದ ಗುಡ್ಡಮ್ಮಗಳ ಚರಣಾಂಬುಜಕ್ಕೆಶರಣು ॥೩೬॥

ಬರುತಿರಲು ಸಕಲ ದೇವೋತ್ತಮನ ಮಹಿಮೆಗಳ ।
ಬಿರುದಮುಗ್ಗಡಿಸೆ ಧ್ವನಿಗೇಳುತಂದೂಷಕರು ।
ಶರದಭ್ರನಿನದಮಂ ಕೇಳ್ದ ಹಂಸಿಗಳಂತೆ ಧರೆಗಿಳಿದ ಧೈರ್ಯವಾಗೀ॥
ಶರಣು ಪೊಕ್ಕಲ್ಲದಸು ನಿಲಲಾರದೆಂದು ಮ ।
ಚ್ಚರವಳಿದು ಚರಣಮಂ ಸಾರ್ದರಂ ಸಲಹಿ ಮುನಿ ।
ಪರ ಶಿರವ ಚಂಡಾಡಿ ಬಂದ ಗುಡ್ಡಮ್ಮಗಳ ಚರಣಾಂಬುಜಕ್ಕೆಶರಣು ॥೩೭॥

ಒಂದೆ ಭಾವದೊಳು ಗುಡ್ಡಮ್ಮಗಳ ಚರಣಾರ ।
ವಿಂದವಂ ನೆನೆವುತ್ತ ಬರುವ ಹಾರುವ ಭಕ್ತ ।
ರಿಂದಲತಿ ವೈಭವಂಗಳು ವೆರಸಿ ತತ್ಪುರದ ಪಶ್ಚಿಮದ ಗೋಪುರದೊಳು ।
ಸಂದಣಿಸಿ ಸಕಲ ಭಕ್ತರುಗಳುಘೇಯೆನುತ ।
ನಿಂದಿರಲು ಮುನ್ನಶಿವಲೊಕವೆಯಿತಂದಂತೆ ।
ಬಂದುಮುದದಿಂದವಮುಂದಿರ್ದಗುಡ್ಡಮ್ಮಗಳಚರಣಾಂಬುಜಕ್ಕೆಶರಣು॥೩೮॥

ವೀರಸಾಮ್ರಾಜ್ಯಸಂಪದಸಿದ್ಧಿರಸ್ತು ಸ ।
ರ್ವಾರೋಗ್ಯಮಸ್ತು ಶಿವಮಸ್ತು ಶೈವನ್ರತಾ ।
ಚಾರನಿಃಕಂಟಕವ್ಯಾಪ್ತಿರಸ್ತು ಶಿವಾತ್ಮಯೋಗೋಸ್ತುಯೆಂದೆನುತಲಿ॥
ಆರುತಿಯನೆತ್ತಿ ಮುತ್ತೈದೇರು ಪರಸುತಿರೆ ।
ವೀರ ಮಾಹೇಶ್ವರರೆನಿಪ್ಪ ಷೋಡಶರ್ತಮ್ಮ ।
ವೀರಗಂಕಣಕೆ ಕೈಯಿತ್ತ ಗುಡ್ಡಮ್ಮಗಳ ಚರಣಾಂಬುಜಕ್ಕೆ ಶರಣು ॥೩೯॥

ಷೋಡಶಕಳಾಭರಿತೆ ಗಿರಿಜೆಯಾಗಿರ್ದಂದು ।
ಷೋಡಶ ವಿಶೇಷ ಕಳೆಗಳಿಗನುಜ್ಞೆಯನಿತ್ತು ।
ಷೋಡಶ ಗಣಂಗಳಾಗಿರಿ ಎಂದು ಅಂದುಕಳುಪಿದಡಿಂದು ಮರ್ತ್ಯದಲ್ಲಿ॥
ಷೋಡಶ ವಿಭೇದ ನಾಮದಿ ಜನಿಸಿದವರ್ಗೈಸೆ ।
ಷೋಡಶರು ಬೇರೊಬ್ಬರಲ್ಲ ನಾಚಯ್ಯಯೆನೆ ।
ಕೂಡೆ ಶರಣಾರ್ಥಿಯೆನೆ ನಲಿವಗುಡ್ಡಮ್ಮಗಳಚರಣಾಂಬುಜಕ್ಕೆಶರಣು॥೪೦॥

ದೇವಿಯೆ ಜಗನ್ಮಾತೆ ನಿನ್ನ ಕಳೆಗಳ ಬಲ್ಲ ।
ಭಾವಜ್ಞರಾರು ನಿನ್ನೀರೂಪು ಯವ್ವನದ ।
ಹಾವಭಾವವಿಳಾಸ ವಿಭ್ರಮವನೋಳ್ಪೊಡೆರಡು ಕ[illegible]ಗಳಸೇ ॥
ಆವಗಂ ಕಣ್ತೀವಿ ನೋಡೆ ಹೆರೆಹಿಂಗದಕ ।
ಣಾವಿಧನ ವಿಶ್ವತಶ್ಚಕ್ಷು ತದ್ಬ್ರಮ್ಹೇಶ ।
ನೇವರಂಯೆನುತ ವಂದಿಸಿದನಾಚಯ್ಯಗಳ ಚರಣಾಂಬುಜಕ್ಕೆಶರಣು ॥೪೧॥

ಲೌಕಿಕನರರು ನೋಡಿ ಬೆರಗಾಗುತಿರಲೊಂದು ।
ಆಕಸ್ಮಿಕದ ಚಂದ್ರಕಾಂತ ಭವನವ ತರಿಸಿ ।
ನಾಕಲೋಕದ ಸಕಲ ವೈಭವಂಗಳ ಸುತ್ತನಿಲಿಸುತ್ತ ದಿಗಧೀಶ್ವರಾ ॥
ಆ ಕಳಾಮೌಳಿ ಬ್ರಮ್ಹೇಶಲಿಂಗನ ಸದಾ ।
ಯಾ ಕಾಲವು ಪಹರಿಯಾಗಿ ಕಾದಿರೆಯೆನುತ ।
ಲಾ ಕುಟಿಲರಿದ್ದೆಡೆಗೆ ನಡೆದ ಗುಡ್ಡಮ್ಮಗಳ ಚರಣಾಂಬುಜಕ್ಕೆ ಶರಣು ॥೪೨॥

ಸಿಡಿಲಬೆಳಗವೋ ಕಾಳಕೂಟ ನಡೆತಪ್ಪೊಂದು ।
ಸಡಗರವೋ ಕಾಲಕಾಮ ತ್ರಿಪುರಮಂ ನೋಡಿ ।
ಘುಡಘುಡಿಸಿ ಭಸ್ಮಾವಶೇಷಮಂ ಮಾಳ್ಪ ಭಾಳಾಕ್ಷದನಲನ ವೇಗವೋ ॥
ಪಡಿಯಿಡುವಡಳವಲ್ಲ ನಿನ್ನ ಯಾದ್ಭೂತವು ।
ಪೊಡವಿಗಚ್ಚರಿಯಾದುದಮ್ಮಮ್ಮಯೆಂದೆನುತ ।
ಪಡೆಮೆಚ್ಚೆನಾಚಯ್ಯಪೊಗಳ್ವಗುಡ್ಡಮ್ಮಗಳ ಚರಣಾಂಬುಜಕ್ಕೆಶರಣು ॥೪೩॥

ಹದಿನಾರು ದಿಕ್ಕಿನೊಳು ಹದಿನಾರು ರಥಿಕರುಂ ।
ಚಮುರಂಗ ಬಲವಾಗಿ ನಿಲಿಸಿ ತಾನೋರ್ವಳೆ ।
ಮದನವಿಜಯ ಬ್ರಹ್ಮಲಿಂಗಪೀಠವನೋಳ್ಪ ಭರದಿ ಪೋಗುತಿಪ್ಪಾಗಳೆ ॥
ಹೃದಯವಿಬ್ಬಗೆಯಾಗಿ ನಾರಾಯಣನ ಪ್ರತಿಮೆ ।
ಯೈದಿ ಸಿಡಿದೆದ್ದು ಹಾರಲು ಕಂಡು ದೂಷಕರು ।
ಮುದವಡಗಿ ನಡುನಡುಗೆನಗುವಗುಡ್ಡಮ್ಮಗಳಚರಣಾಂಬುಜಕ್ಕೆಶರಣು ॥೪೪

ಕರ್ಮ ಸಾಕ್ಷಿಯ ಬಿಂಬಮಂ ಕಾಣುತಂ ಬಾಹ್ಯ ।
ಕರ್ಮಚಕ್ಷು ವ್ಯಾಪಕತಮಂ ಪರೆವಂತೆ ।
ಕರ್ಮಕಾಂಡ ಭ್ರಮಿತರಾದಂತರಿಯ ದೃಷ್ಟಿಗಳ ಮಾಯಾಮಲಂಪಿಂಗುತಾ ॥
ನಿರ್ಮಲ ಜ್ಞಾನಮುದಿಸುತ ಜಗಜ್ಜನನಿಯಂ ।
ಕೂರ್ಮೆಯಿಂ ಕಂಡು ಪಾದಕ್ಕೆರಗೆ ಕರುಣಿ ಶಿವ ।

ಧವೆರ್ಯೋಪದೇಶವಿತ್ತೊಲಿವ ಗುಡ್ಡಮ್ಮಗಳ ಚರಣಾಂಬುಜಕ್ಕೆ ಶರಣು॥೪೫॥
ವರಗೊರಗಿ ದುಃಸ್ವಪ್ನ ಕಾಣುತೆಚ್ಚತ್ತು ತಾಂ।
ಬೆರಗಾಗಿ ದೋಷ ಹರಣಾರ್ಥವಾಗಿ ಪಲ।
ತೆರದ ಜಪಹೋಮ ಪೂಜಾಧ್ಯಾನವಿಧಿಗಳಿಂ ಶಾಂತಿಯಂ ಮಾಡುವಂತೆ॥
ಮರಹಿನಿಂ ಬಂದ ದುಷ್ಕರ್ಮವಂ ತೀರ್ಚಿಸಲು।
ಉರಿವ ಜಪ ಹೋಮಾದಿಗಳನಿಲ್ಲಿ ಮಾಳ್ಪೆವೆಂ।
ದರುಪಿದಭಿನವಶಿಷ್ಯವರದೆಗುಡ್ಡಮ್ಮಗಳಚರಣಾಂಬುಜಕ್ಕೆಶರಣು॥೪೬॥
ನೀವೆಲ್ಲರುಂ ನಿಮ್ಮ ಬಂಧುವರ್ಗಂ ಸಹಿತ।
ಈ ವಿಶ್ವತಃಚಕ್ಷುವೆನಿಸುವ ಬ್ರಹ್ಮೇಶ।
ದೇವಂಗೆ ಸರ್ವ ಮಂಗಳ ಕಾರ್ಯ ತೀರ್ಚಿ ಗುಡಿ ತೋರಣಂಗಳ ಕಟ್ಟಿಸಿ॥
ತೀವಿ ಧೂಪಾರತಿಗಳಂ ಕಳಸ ಮುಕುರ ಪು।
ಷ್ಪಾವಳಿಗಳಿಂ ಶಿವನ ಭವನಮಂ ಸಿಂಗರಿಸಿ।
ದಾ ವಡನೆಬಪ್ಪೆವರಿ ಎಂದಗುಡ್ಡಮ್ಮಗಳಚರಣಾಂಬುಜಕ್ಕೆಶರಣು॥೪೭॥
ವಿಷವಮೃತವಾಗದಿಹುದೆ ಶಿವನಭಕ್ತರಿಗೆ।
ಭಷಕನಂ ಕರೆತಂದು ವೇದ ಮೋದಿಸರೆ ನಿ।
ಸ್ತುಷವಾಗಿ ಹುರಿದು ಬೀಜವ ಬಿತ್ತಿಬೆಳೆಯರೆ ಮೃತರನೆಬ್ಬಿಸಿ ನುಡಿಸರೆ॥
ವೃಷೆಯ ವೇಷವನು ಸಹಜದ ವೇಷವೆನಿಸರೆ।
ವೃಷಭವಾಹನನೊಲುಮೆಯುಳ್ಳವರ್ಗಿದನರಿದು।
ಹುಸಿಎಂದಗುಡ್ಡಮ್ಮ ಎಂದನಾಚಾರ್ಯಗಳಚರಣಾಂಬುಜಕ್ಕೆಶರಣು॥೪೮॥
ಕರುಣದೆ ಗುಡ್ಡಮ್ಮ ನಿತ್ತ ವರದಿಂ ತಮ್ಮ।
ಕರುಣಂಗಳರ್ಥ ರೌದ್ರಂಪಿಂಗಿ ಶಾಂತರಸ।
ದೊರೆಕೊಂಡವರ್ಗೆದುಷ್ಕೃತಕರ್ಮ ದೋಷಮಂಪರಿಹರಿಪೆವೆಂದುನೆನದು॥
ಹಿರಿಯರಂ ವೇದಾಗಮಾರ್ಥ ತತ್ವಜ್ಞರಂ।
ವರಮಂತ್ರ ತಂತ್ರ ಹೋಮಾರ್ಚನಾ ನಿರತರಂ।
ಕರಿಸಿದಭಿನವ ಶಿಷ್ಯ ವರದೆ ಗುಡ್ಡಮ್ಮಗಳ ಚರಣಾಂಬುಜಕ್ಕೆ ಶರಣು॥೪೯॥
ಕರಿಸಿ ಕುಳ್ಳಿರಿಸಿ ಸರ್ವಜ್ಞ ಸಭೆಗಿದಿರಾಗಿ।
ಕರ ಕಮಲಮಂ ಮುಗಿದು ಪೂರ್ವ ವೃತ್ತಾಂತಮಂ।
ಪರಿಯಾಯದಿಂದೆ ಬಿನ್ನವಿಸೆ ತದ್ದೋಷ ಹರಣಾರ್ಥದ ವಿಧಾನಂಗಳಾ॥
ಹಿರಿಯರೆಲ್ಲರು ಪೇಳೆ ಕೈಕೊಂಡ ಹತ್ತು ಸಾ।

ವಿರ ಹೊನ್ನ ನಾನಾ ವಿಧಾನಂಗಳೋಚಿತವ।
ಪರುಟವಿಸುತಿಹ ಶಿಷ್ಯವರದೆ ಗುಡ್ಡಮ್ಮಗಳ ಚರಣಾಂಬುಜಕ್ಕೆ ಶರಣು॥೫೦॥
ಪರಮಾನುರಾಗದಿಂ ಸಕಲ ಮಂಗಲ ಕಾರ್ಯ।
ಪರಿಯಾಯವೆಲ್ಲವುಂ ಪೂರವಿಸೆ ಪುರವೆಯಿದೆ।
ಹರುಷದಿಂ ಗುಡಿಗಟ್ಟಿ ವೀಧಿವೀಧಿಯಲಿವಳಿಯದೆ ರಂಗವೋಲೆಯಿಂದಾ॥
ವಿರಚಿಸಲು ನಾನಾ ವಿಚಿತ್ರ ಶೃಂಗಾರದಿಂ।
ಹರ ಭವನವಂ ಶೃಂಗರಿಸಿ ನೋಡಿ ಹೆಚ್ಚುತಂ।
ಬರುವ ಹಾರುವ ಶಿಷ್ಯ ವರದೆಗುಡ್ಡಮ್ಮಗಳ ಚರಣಾಂಬುಜಕ್ಕೆಶರಣು॥೫೧॥
ಕಾರವುಂಬನಿಗಳಂ ಚಾತಕಂಗಳು ಕುಸುಮ।
ಸಾರವಂ ಭ್ರಮರಾಳಿಯಿಂದು ಕಿರಣಂಗಳಂ।
ಕೈರವಂ ಫಲಭರಿತವಾದ ನಂದನವನಂ ಶುಕಪಿಕಂ ಪಾರುವಂತೆ॥
ಓರಂತೆ ಮನವಾರೆ ಪುರಜನಂ ಪರಿಜನಂ।
ಕಾರುಣ್ಯವಡೆದ ಶಿಷ್ಯಾವಳಿಗಳುಂ ಸಹಿತ।
ವೀರನಾಚಯ್ಯ ಬರಲರಿದ ಗುಡ್ಡಮ್ಮಗಳ ಚರಣಾಂಬುಜಕ್ಕೆಶರಣು॥೫೨॥
ವೀರನಾಚಯ್ಯಗಳ ಸಹಿತ ಹರುಷದೊಳಲಂ।
ಪೂರ ಪಶ್ಚಿಮದ ಗೋಪುರದಲ್ಲಿ ಮೆರೆವ ಧವ।
ಳಾರದೊಳು ತೊಲಗುವ ಬ್ರಹ್ಮೇಶ್ವರಂಗೆ ನಮಿಸುತ್ತ ಷೋಡಶರುಸಹಿತಾ॥
ಕಾರುಣ್ಯಸಿಂಧು ಜಯ ಜಯ ಜೀಯ್ಯ ಭವನೋ।
ದ್ಧರಣನೇ ನಿನ್ನ ನಿಜ ಭುವನವನು ಹೋದುದವ।
ಧಾರೆನುತ ಪುಷ್ಪಕಕೆ ತಂದ ಗುಡ್ಡಮ್ಮಗಳ ಚರಣಾಂಬುಜಕ್ಕೆಶರಣು॥೫೩॥
ಪೊಡೆವ ನಿಸ್ಸಾಳ ಕೋಟಿಯ ಭೇರಿ ಶಂಖಗಳ।
ಜಡಿವ ಬಿರುದಿನ ಕಹಳೆಗಳ ನಡುವೆ ಸಂಭ್ರಮಿಸಿ।
ನಡುವೆ ಮಂಗಳ ಪಾಠಕರ ಗೀತ ನೃತ್ಯಂಗಳಾರುತಿಯ ಸುರಸತಿಯರಾ॥
ಕಡುಗಂಪಿ ನೆಸೆವ ಧೂಪದ ಕುಸುಮ ವರುಷದಿಂ।
ಪೊಡವಿ ಪುಳುಕಿತೆಯಾಗಿ ಸಕಲಗಣ ಸಂಕುಳದ।
ನಡುವೆಬರುತಿರ್ಪ ವರದಾನಿಗುಡ್ಡಮ್ಮಗಳ ಚರಣಾಂಬುಜಕ್ಕೆಶರಣು॥೫೪॥
ಬರುತಿರ್ಪ ಗುಡ್ಡಮ್ಮಗಳನಿದಿರುಗೊಂಡು ದಾ।
ಪುರಜನಂ ಕಳಸ ಕನ್ನಡಿ ಛತ್ರ ಚಾಮರದಿ
ಪರಿಪರಿಯ ತೋರಣದಿ ನಂದಿಯ ಪತಾಕೆಯಿಂ ವಿವಿಧಮಂಗಳವಾದ್ಯದಿಂ॥

ಹರ ಭವನಮಂ ಪೊಕ್ಕು ನಾನಾ ಮಹೋತ್ಸವಂ ।
ಬೆರಸಿ ಪಂಚಾಮೃತದೊಳಭಿಷೇಕಮಂ ಮಾಡಿ ।
ಹರನನಾಹರಿಪೀಠದೊಳುಸಿಲಿಸಿದಂಬಿಕೆಯಚರಣಾಂಬುಜಕ್ಕೆಶರಣು॥೫೫॥
ಓರಂತೆ ಮನವಾರೆ ಷೋಡಶರ ಗೂಢತರ ।
ವೀರರಸಮಂ ಧರೆಗೆ ತೋರಿ ಮೆರೆದಪೆನೆಂದು ।
ದಾರ ಧೀರೋತ್ತಮ ಬ್ರಹ್ಮೇಶ್ವರಂ ಪೀಠದೊಳು ನಿಲ್ಲಲಾರದೊಡನೆ ॥
ಓರಣಿಸಿ ನಿಂದು ಶಸ್ತ್ರಂಗಳಂ ಪಡೆವುತವ ।
ಧಾರೆನುತ ಷೋಡಶ ಶಿರಃ ಕಮಲಮಂ ಶಿವನಿ ।
ಗಾರಾಧಿಸಲು ಮೆಚ್ಚಿ ವರವಿತ್ತ ಶಂಕರನ ಚರಣಾಂಬುಜಕ್ಕೆ ಶರಣು ॥೫೬॥
ಹರುಷದಿಂ ವೀರ ಗುಡ್ಡಮ್ಮಗಳು ಮೊದಲಾದ ।
ಪರಮ ವೀರ ವ್ರತಾಚಾರ ನಿಷ್ಠಾ ಭಕ್ತಿ ।
ಪರಿಪೂರ್ಣರೆನಿಪ ಷೋಡಶರಚರಿತಮನೊಲಿದು ಕೇಳ್ದು ಲಾಲಿಸುವವರಿಗೆ।
ನಿರುಪಮೈಶ್ವರ್ಯ ಮಾಯುಷ್ಯ ಮಾರೋಗ್ಯ ಮುಮಾ ।
ವರಶಿವ ಜ್ಞಾನಯುತ ಸದ್ಭಕ್ತಿ ದೊರೆಕೊಂಡು ।
ಪರಶಿವನೊಳೈಕ್ಯವಾಗಿರ್ಪರಂದೊರೆವ ಶಿವ ಚರಣಾಂಬುಜಕ್ಕೆಶರಣು॥೫೭॥

22466.

# ವರದಾನಿ ಗುಡ್ಡವ್ವೆಯ ಚರಿತ್ರೆಯಲ್ಲಿಯ
## ಶ್ಲೋಕಗಳ ಭಾವಾರ್ಥ.

— ಃಃ —

ವರಪ್ರದಳಾದ ಗುಡ್ಡವ್ವೆ ಮೊದಲಾದ ಹದಿನಾರು ಜನ ವೀರಭಕ್ತರ ಚರಿತ್ರೆಯನ್ನು ಸರ್ವರು ಕೇಳಿ ಪುನೀತರಾಗತಕ್ಕದ್ದು.

ಭೃಂಗಿನಾಥನೆಂಬ ಪ್ರಮಥನು ಸಗುಣರೂಪಿಯಾದ ಶಿವನನ್ನು ಪೂಜಿಸುವಾಗ ಆತನ ಎಡಭಾಗವನ್ನು ಬಿಟ್ಟು ಪೂಜಿಸಿದ್ದರಿಂದ ಆ ಭಾಗದಲ್ಲಿರುವ ಪಾರ್ವತಿಯು ಭೃಂಗಿಯನ್ನು ಕುರಿತು, ಎಲೋ ಭೃಂಗಿಯೇ! ನೀನು ನನ್ನ ಹಂಗಿನವನಿದ್ದು ಪರಿಹಾಸ ಮಾಡುವಿಯಾ? ಎಂದು ಸಿಟ್ಟಿನಿಂದ ನುಡಿದಳು. ॥೧॥

ಆಗ ಭೃಂಗಿಯು ರಸಮಯವಾದ ರಕ್ತ ಮತ್ತು ಮಾಂಸಗಳೆಂಬ ಆಳವಾದ ಕೆಸರಿನಲ್ಲಿ ಪಶುವಾಗಿ ಬಿದ್ದು ಹೊರಳಾಡುತ್ತ ಕಾಮನ ಬಾಣಕ್ಕೊಳಗಾಗಿ ಮಾಯಾ ಮೋಹಿತರಾದ ಜೀವಿಗಳ ಹಾಗೆ ನನ್ನನ್ನು ಭಾವಿಸುವಿಯಾ? ಅಲ್ಪ (ನಶ್ವರ) ರೂಪಗಳಾದ ನಿನ್ನ ಮಾಯಿಕ ಪದಾರ್ಥಗಳನ್ನು ಇಕೋ ತೆಗೆದುಕೋ ಎಂದು ಭೃಂಗಿಯು ತನ್ನ ಶರೀರಗತ ಅನಾತ್ಮಾಂಶಗಳನ್ನೆಲ್ಲ ಈಡಾಡಿ ಕೇವಲ ಚಿನ್ಮಯ ಶಿಶುವಾಗಿ ಶೋಭಿಸಿದನು. ॥೨॥

ಎಲೈ ಪಾರ್ವತಿಯೇ ನಿನಗಿಂತ ಶ್ರೇಷ್ಠರಾದವರ ಕೂಡ ನಿನ್ನ ಯೋಗ್ಯತೆಯನ್ನು ತಿಳಿಯದೆ ಈ ಪ್ರಕಾರ ಮಾತಾಡುವರೇ? ವಿಚಾರ ಮಾಡಲು ನೀನು ದೇಹಾಭಿಮಾನಿ, ಅವರು ನಿರ್ದೇಹಿಗಳು, ಭವರಹಿತರು ನೀನು ಭವಮಾಲೆಗೆ ಒಳಗಾದವಳು, ಇದಕ್ಕೆ ನಾನೂ ನೀನೂ ಸಾಕ್ಷಿ; ಕಾರಣ ಅವರ ಅಭೀಷ್ಟದಂತೆ ಮಾನವ ಜನ್ಮವನ್ನು ತಾಳಿ ಬಾ ಎಂದು ಪರಮೇಶ್ವರನು ಶಾಪಿಸಿದನು. ॥೩॥

ಅಧಿಕ ಪದಹೊಂದಿ ಕೀಳ್ನುಡಿಯಾಡ ಬಹುದೇ? ಕೀಳ್ನುಡಿಯು ನಿನ್ನ ಗೌರವತ್ವವನ್ನು ನಾಶಮಾಡದೇ? ಕಾರಣ ನೀನು ಮೃತ್ಯು ಲೋಕಕ್ಕೆ ಹೋಗಿ ಗುಡ್ಡವ್ವೆಯ ಅವತಾರ ತಾಳು, ವೀರಭಕ್ತಳಾಗು, ಶಿವದ್ರೋಹಿಗಳನ್ನು ಇಲ್ಲದಂತೆ ಮಾಡಿ ಅಲ್ಲಿ ಶಿವಲಿಂಗವನ್ನು ಸ್ಥಾಪಿಸು. ॥೪॥

ಗಿರಿಜೆಯೇ "ನಾನು ಮೃತ್ಯುಲೋಕದಲ್ಲಿ ಹುಟ್ಟಿ ನಿನ್ನನ್ನಗಲಿ ಕಷ್ಟಬಡಬೇಕಾಗುವದೆಂದು" ಚಿಂತಿಸಬೇಡ, ನೀನು ನನ್ನಲ್ಲಿ ಅಡಕವಾಗಿದ್ದದರಿಂ

ದಲೇ ಜನರು ನನ್ನನ್ನು (ಜ್ಞಾನ ದೃಷ್ಟಿಯಿಂದ) ನೋಡ ಬಲ್ಲರು ನಿನ್ನ ಕಷ್ಟವೇ ನನ್ನ ಕಷ್ಟವೆಂಬದನ್ನು ನಂಬು ಎಂದು ಶಿವನು ಅಭಿವಚನ ಕೊಟ್ಟನು. ||೫||

ಗುಡ್ಡಾಪುರದಲ್ಲಿ ಸೋಮೇಶ ಲಿಂಗನ ಗುಡಿಯದೆ. ಅಲ್ಲಿ ಶಿವಕಲೆಯು ಜ್ಞಾನವನ್ನುಂಟುಮಾಡಲು ಅವತರಿಸ ಹೋಗು, ಚಂದ್ರನ ಕಲೆಯಂತೆ ಬೆಳೆಯುತ್ತ ದೊಡ್ಡವಳಾಗಿ ಮಹಾಲಿಂಗ ಸೇವೆಯಲ್ಲಿರು, ಎಂದು ಶಿವನು ಪಾರ್ವತಿಗೆ ಅಪ್ಪಣೆ ಕೊಟ್ಟನು. ||೬||

ಇತ್ತ ಭೃಂಗಿಯ ಮೇಲೆ ಮುನಿದ ಉಮೆಯು ಈಶ್ವರನ ಶಾಪದಿಂದ ಮೃತ್ಯುಲೋಕದೊಳಗಿರುವ ಗುಡ್ಡಾಪುರದಲ್ಲಿ ಸೋಮೇಶ್ವರ ಭಕ್ತರ ಗರ್ಭ ದಲ್ಲಿ ಅವತರಿಸಿದಳು. ಮತ್ತು ಯೌವನೋದಯದ ವರೆಗೆ ಯಾವಾಗಲೂ ಶಿವಪೂಜೆಯನ್ನು ಮಾಡುತ್ತಿದ್ದಳು. ||೭||

ಗುಡ್ಡಾಪುರದ ಪೂರ್ವಕ್ಕೆ ೩೦ ಗಾವುದದ ಮೇಲೆ ಅಲಂಪುರವೆಂಬ ಗ್ರಾಮವು. ಅದರಲ್ಲಿ ಬ್ರಹ್ಮೇಶ ಲಿಂಗಾಲಯವು. ಬ್ರಹ್ಮೇಶನ ವೀರಭಕ್ತನೇ ವೀರನಾಚಿದೇವನು. ಹೀಗಿರಲು ಪರಮತೀಯರು ಬ್ರಹ್ಮೇಶ ಲಿಂಗವನ್ನು ಕಿತ್ತಿ ನದಿಯಲ್ಲಿ ಒಗೆದು, ಆ ಪೀಠದಲ್ಲಿ ನಾರಾಯಣ ಮೂರ್ತಿಯನ್ನಿರಿಸಲು ಇದನ್ನು ನೋಡಿ ವೀರವ್ರತಿಯಾದ ನಾಚಯ್ಯನು ಮರಗುತ್ತ ಅನ್ನವನ್ನೇ ಬಿಟ್ಟನು. ||೮||

ಆಗ ಬ್ರಹ್ಮೇಶನು ವೀರ ನಾಚಯ್ಯನ ಕನಸಿನಲ್ಲಿ ಬಂದು ಶಿವದ್ರೋಹಿ ಗಳನ್ನು ಖಂಡಿಸಲಿಕ್ಕೆ ಸಿದ್ಧಳಾದ ನನ್ನ ಅರ್ಧಾಂಗಿಯಾದ ಪಾರ್ವತಿಯು ಗುಡ್ಡಮ್ಮೆಯಾಗಿ ಅವತರಿಸಿರುವಳು. ನೀನು ಗುಡ್ಡಪುರಕ್ಕೆ ಹೋಗಿ, ಈ ಸಂಗತಿಯನ್ನು ಅವಳಿಗೆ ಸೂಚಿಸೆಂದು ಅಪ್ಪಣೆಯನ್ನೀಯಲು ಕೂಡಲೆ ವೀರನಾಚಯ್ಯನು ಬ್ರಹ್ಮೇಶನಿಗೆ ನಮಿಸುತ್ತಿರಲು ಎಚ್ಚತ್ತನು. ||೯||

ನಂತರ ವೀರನಾಚಯ್ಯನು ಬ್ರಹ್ಮೇಶನ ಕೃಪೆಯನ್ನು ಮನಸ್ಸಿನಲ್ಲಿ ನೆನೆದು ಗುಡ್ಡಾಪುರಕ್ಕೆ ಹೋಗಿ, ಗುಡ್ಡಮ್ಮೆಯ ಪಾದಕ್ಕೆರಗಿದನು. ಆಗ ಅವಳು ಆತನು ಬಂದ ಕಾರಣವನ್ನೂ ಆತನ ಇಂಗಿತವನ್ನೂ ವ್ರತವನ್ನೂ ತಿಳಕೊಳ್ಳಲು ಅಭಯವನ್ನು ಕೊಡುತ್ತ ಮಾತಾಡಿದಳು. ||೧೦||

ಅಯ್ಯನಾಚಯ್ಯಗಳೇ, ಇಲ್ಲಿಗೆ ತಾವು ದಯಮಾಡಿಸಿದ ಕಾರಣ ವೇನು; ಯಾವ ಸೇವೆಯನ್ನು ನನಗೆ ಕರುಣಿಸಲು ಬಂದಿರಿ; ಎಂದು

ಕರುಣಾರಸಭರಿತೆಯಾದ ಗುಡ್ಡವ್ವೆಯು ಕೇಳಲು ಆಗ ನಾಚಯ್ಯನು ಅವಳನ್ನು ವಿಶೇಷವಾಗಿ ಕೊಂಡಾಡಿದನು. ॥೧೧॥

ಜಗಜ್ಜನನಿಯಾಗಿ ಜೀವಿಗಳ ಸೂತ್ರಧಾರಿಯಾಗಿ ಜಗತ್ತಿನ ಸೃಷ್ಟಿಸ್ಥಿತಿ ಲಯ ಕರ್ತೃವಾಗಿದ್ದ ನಿನ್ನ ನಿಜವನ್ನು ಪರಶಿವನೇ ಬಲ್ಲನಲ್ಲದೆ ಇನ್ನಿತರರು ಅರಿಯರು ಎಂದು ನಾಚಿದೇವನು ಅನ್ನಲು ಗುಡ್ಡವ್ವೆಯು ನಕ್ಕಳು ॥೧೨॥

ತಂದೆಯೇ ನಾನು ಜಗಜ್ಜೀವಿಗಳ ಯಂತ್ರ ಸೂತ್ರ ಧಾರಿಯೆಂದು ತಿಳಿದು ನನ್ನನ್ನು ಕೊಂಡಾಡುವಿಯಾ? ಜಗತ್ತು ಯಾರ ಹೊಟ್ಟೆಯಲ್ಲಿ ಅಡಕವಾಗಿರುವದು? ಸಂಸಾರವೆಂಬ ನಾಟಕವನ್ನಾಡುವವರಾರು? ಆಡಿಸುವವರು ಯಾರು? ಈ ಎರಡೂ ಕಾರ್ಯಗಳನ್ನು ನೋಡಿ ಪ್ರೀತಿಸುವವರು ಯಾರು? ಎಲ್ಲ ಕಡೆಗೆ ಪರಮೇಶ್ವರನ ಎಂಟು ಅಂಗಗಳು ವ್ಯಾಪ್ತವಾಗಿವೆ. ಪೃಥ್ವ್ಯಾದಿ ಎಂಟು ಅಂಗಗಳನ್ನು ಮಾಡಿದವರು ಯಾರೆಂಬದನ್ನು ಶಿವಶರಣರೇ ಬಲ್ಲರೆಂದು ಗುಡ್ಡವ್ವೆಯು ನುಡಿದಳು. ॥೧೩॥

ಈಶ್ವರನ ಕರುಣಾರಸವೇ ಮೂರ್ತಿಮಂತವಾಗಿ ಬಂದಿರುವಿರೋ? ನನ್ನ ಮನುಷ್ಯ ಜನ್ಮವನ್ನು ನೀಗಿಸಲು ಬಂದಿರುವಿರೋ? ಪುರುಷಾರ್ಥಗಳು ಸಿದ್ಧಿಸುವವೆಂದು ಸೂಚಿಸಲು ಬಂದಿರೋ? ನನ್ನ ಪತಿಯನ್ನು ತೋರಿಸಲು ಬಂದಿರೋ? ಪರಮೇಶ್ವರನಿಗೆ ಯೋಗ್ಯ ಕನ್ಯೆಯೆನಿಸ ಬಂದಿರೋ? ಹೇಳುವದಾಗಬೇಕೆಂದು ಗುಡ್ಡವ್ವೆಯು ವೀರನಾಚಯ್ಯನನ್ನು ಕುರಿತು ಮಾತಾಡಿದಳು. ॥೧೪॥

ಜೀವರಿಗೆ ಹೇಳಿದುದನ್ನು ಮಾತ್ರ ತಿಳಕೊಳ್ಳುವ ಶಕ್ತಿಯುಂಟು. ಪರಶಿವ ಚಿಚ್ಛಕ್ತಿರೂಪಳಾದ ಹೇಳದುದನ್ನು ಕೂಡ ಅರಿವ ಅರಿವಿನ ನಿಲುವೆನಿಸುವ ನಿನಗೆ ಬೇರೆ ಹೇಳುವದೇನಿದೆ? ಎಂದು ವೀರನಾಚಯ್ಯಗಳು ಸಾದ್ಯಂತವಾಗಿ ಉಸುರಲು ಗುಡ್ಡವ್ವೆಯು ವೀರಮುದ್ರೆಯಿಂದ ತನ್ನ ಪ್ರತಿಮೆಯಂತಿರುವ ಶಿವಗಣಂಗಳನ್ನು ಕರೆದಳು. ॥೧೫॥

ನನ್ನ ಯೌವನವು ವ್ಯರ್ಥವೆನಿಸಲಿಲ್ಲೆಂದು ಗುಡ್ಡವ್ವೆಯು ಹೊನ್ನಯ್ಯ ಪಾಂಡ್ಯ ನಾಯಕ, ಕಿನ್ನರ ಬ್ರಹ್ಮಯ್ಯ, ವೀರದೇವ, ಬಿಜ್ಜಯ್ಯ, ಸೋಮಯ್ಯ, ಕಾಳಯ್ಯ ಮುಂತಾದ ಪ್ರಮಥರನ್ನು ಸನ್ನಾಹದೊಂದಿಗೆ ಕರೆಯಿಸಿ ಅವರಿಗೆ ನಮಸ್ಕರಿಸಿದಳು. ॥೧೬॥

ನಂದಿಮುಖ, ಹಂದಯ್ಯ, ಬಾಚಯ್ಯ, ರೇವಯ್ಯ, ಚಿಕ್ಕಲಿಗೆಯ ನಾಗಯ್ಯ, ಬಾಚಿದೇವ ಮೊದಲಾದ ಪ್ರಮಥರನ್ನು ಕರೆಯಿಸಿ ಅವರವರ

ತಾರತಮ್ಯದಂತೆ ಬರಹೇಳಿ, ಕಾರ್ಯ ಕ್ರಮಗೊತ್ತು ಪಡಿಸಿ ಗುಡ್ಡಮ್ಮೆಯು ನಾಚಿ ದೇವರನ್ನು ಕುರಿತು ಮಾತಾಡಿದಳು. ॥೧೭॥

ವಾಚಾತೀತನಾದ ಲಿಂಗಾನುಭಾವಿಯಾದ ನಾಚಿದೇವನನ್ನು ಕುರಿತು ಗುಡ್ಡಮ್ಮೆಯು ಸನ್ನೆಮಾಡಿ (ತಲೆವಾಗಿ) ಕೈಮುಗಿದು ಸುತ್ತಲಿನ ಎಲ್ಲ ಗ್ರಾಮಗಳು ಸಹ ಅಲಂಪುರದ ಎಲ್ಲ ಶಿವಭಕ್ತ ಜನಸಮೂಹಕ್ಕೆ ಹೊರ ಗಿರಲು ಸೂಚಿಸಿದಳು. ॥೧೮॥

ಅತ್ತ ಅಲಂಪುರಕ್ಕೆ ನಾಚಿದೇವರನ್ನು ಕಳುಹಿಸಿ ಇತ್ತ ಪ್ರಮಥಗಣದೊಡನೆ ವಿನೋದಿಸುತ್ತ, ಪ್ರೀತಿಸುತ್ತ, ನಮಸ್ಕರಿಸುತ್ತ, ಪುಳಕಾಂಕುರದಿಂದ ಆನಂದ ಪಡುತ್ತ ಹದಿನಾರು ಜನ ಪ್ರಮಥರಿಗೋಸುಗ ಹದಿನಾರು ರಥಗಳನ್ನು ತರಿಸಿ ಪತಾಕೆಗಳನ್ನು ಎತ್ತಿಸಿ ಶರಣರ ಸುಕೀರ್ತಿ ಬಿರುದಾವಳಿಗಳನ್ನು ಸಾರುತ್ತ ರಥಗಳನ್ನೇರಿ ಗುಡ್ಡಮ್ಮೆ ಮೊದಲಾದ ವೀರ ಗಣವು ಅಲಂಪುರಕ್ಕೆ ದಾಳಿಯಿಡಲು ಹೊರಟಿತು. ॥೧೯॥

ಅನೇಕ ವಿಧಾಯುಧಗಳೊಡನೆ ವೀರ ಭಟಗಣವು ಅಲಂಪುರಕ್ಕೆ ದಾಳಿಯನ್ನಿಡಲು ಹೊರಡಲು, ಆಗ್ಗೆ ಅದು ಶಿವನ ನಡುಗಣ್ಣೊಳು ಹುಟ್ಟಿದ ಕೋಪಾಗ್ನಿಯೋ? ಪ್ರಳಯಕಾಲದ ರುದ್ರನ ಸೈನ್ಯವೋ? ದಕ್ಷ ಬ್ರಹ್ಮನ ಯಜ್ಞವನ್ನು ನಾಶಮಾಡಿದ ವೀರಭದ್ರನ ವೀರಗಣವೋ? ಎಂಬಂತೆ ಕಾಣಿಸಿತು. ॥೨೦॥

ಶಿವನಲ್ಲದನ್ಯ ದೈವವುಂಟೆನ್ನುವವರಿಗೆ ಎದೆಶೂಲಿಯಾಗಿ, ಶಿವನಿಂದಕರನ್ನು ಕೊರೆಯುವ ಮೂಗಿನ ಕತ್ತಿಯಾಗಿ, ವೀರಶೈವಾಚಾರ ವಿರೋಧಿಗಳೆಂಬ ಪರ್ವತಕ್ಕೆ ವಜ್ರಾಯುಧವಾಗಿ, ವೀರಶೈವ ಮತಕ್ಕೆ ಸೂರ್ಯನೇ ಆಗಿ, ಶಿವಚಿಹ್ನ ವಿರೋಧಿ ವಂಶಕ್ಕೆ ದಾವಾನಲವಾಗಿ, ಶಿವಪ್ರಸಾದ ವಿದೂರರೆಂಬ ಸಮುದ್ರಕ್ಕೆ ಬಡಬಾನಲವಾಗಿ, ಹುಟ್ಟಿ ಬಂದಳೋ ಎಂಬಂತೆ ಗುಡ್ಡಮ್ಮೆಯು ತೋರಿದಳು ॥೨೧॥

ಇತರ ಮತಗಳೆಂಬ ಕನೇಕಮಲಗಳು ಪೂರ್ಣ ಮುಚ್ಚಿರಲು ಸ್ವಮತಗಳೆಂಬ ಕೆಂಪು ಕಮಲಗಳು ಹಿಗ್ಗುತ್ತಿರಲು ನಿರ್ಮಳಾಂತಃಕರುಣಿಗಳ ಚಿಂತೆಯೆಂಬ ಕತ್ತಲೆಯು ಕಡಿಮೆಯಾಗುತ್ತಿರಲು ಶಿವಯೋಗಿಗಳೆಂಬ ಚಕ್ರವಾಕಗಳು ಕುಣಿಯಲು ನಿರ್ಮಲವಾದ ಶಿವಧರ್ಮವೆಂಬ ಪೂರ್ವದಿಕ್ಕಿನ ಶಿಖರದಲ್ಲಿ ಮನೋಹರವಾದ ಶಿವತೇಜೋ ಮಂಡಲವೆಂಬ ಸೂರ್ಯ

ಮಂಡಲವು ಉದಯವಾಯಿತೆಂಬಂತೆ ರತ್ನ ಖಚಿತ ರಥಾರೂಢಳಾಗಿ ಗುಡ್ಡವ್ವೆಮ್ಮಯು ಶೋಭಿಸಿದಳು ॥೨೨॥

ವೀರನಾಚಯ್ಯ ಮೊದಲಾದ ಶಿವಭಕ್ತ ಶಿವಗಣಂಗಳ ಅಲಂಪುರದ ಹೊರಗೆ ಹೂದೋಟವಲ್ಲಿ ಇಳಕೊಂಡು ನಿಶ್ಚಿಂತೆಯಿಂದಿರಲು, ಕಹಳೆ ಭೇರಿ ನಿಸ್ಸಾಳ ಮೊದಲಾದ ರಣಭೇರಿ ಸಪ್ಪಳವನ್ನಂಟು ಮಾಡುತ್ತ ಗುಡ್ಡವ್ವೆಮ್ಮಯು ವಿನೋದದಿಂದ ಬರುತ್ತಿದ್ದದ್ದನ್ನು ಅವರು ತಿಳಕೊಂಡರು. ॥೨೩॥

ತನ್ನ ಪತಿಯಾದ ಬ್ರಹ್ಮೇಶ್ವರಲಿಂಗಪ್ರತಿಷ್ಠಾಪನ ಕಾರ್ಯವನ್ನು ನೆರವೇರಿಸಬೇಕೆಂದು ಗುಡ್ಡವ್ವೆಮ್ಮಯು ಬರುತ್ತಿದ್ದಾಳೆ, ನೀವೆಲ್ಲರು ಅತ್ಯಂತ ಪ್ರೀತಿಯಿಂದ ಕೂಡಿಕೊಂಡು ಕಲಶ ಕನ್ನಡಿ ಮಂಗಳಾರತಿಗಳನ್ನು ಹಿಡಿದು ನೃತ್ಯ ವಾದ್ಯದೊಡನೆ ಹಾಡುತ್ತ, ಪೂಮಳೆಗರೆಯುತ್ತ, ಇದಿರುಗೊಳ್ಳುತ್ತ ಬರ್ರಿ ಯೆಂದು ಕರಕೊಂಡು ನಾಚಯ್ಯನು ಎಲ್ಲ ಶಿವಭಕ್ತರೊಡನೆ ನಡೆದನು ॥೨೪॥

ಶಿವಭಕ್ತ ಶಿವಶರಣರೊಡಗೂಡಿದ ನಾಚಯ್ಯನು ಮಂಗಳೋಪಕರಣಗಳನ್ನು ತರಿಸಿ ಎಲ್ಲ ಕಡೆಗೆ ಉತ್ಸವದ ಸುದ್ದಿಯನ್ನು ಬೀರಿ ಎದುರುಗೊಳ್ಳಲು ಹೋಗಿ ನಮಸ್ಕರಿಸುತ್ತಿರಲು ಮುಂದೆ ಗುಡ್ಡವ್ವೆಮ್ಮಯು ವೀರಗಣಸಹಿತ ಹದಿನಾರು ರತ್ನ ಖಚಿತ ರಥಗಳಲ್ಲಿ ಸಡಗರದಿಂದ ಬರುವಾಗ ಸೂರ್ಯ ಬಿಂಬವು ಹಲವಾದಂತೆ ಶೋಭಿಸಿತು. ॥೨೫॥

ಕುರುಡನಿಗೆ ಕಣ್ಣುಗಳು ಬಂದಂತೆ, ದರಿದ್ರನಿಗೆ ಧನನಿಧಿಯು ದೊರಕಿದಂತೆ, ಹಸಿದವನಿಗೆ ಪರಮಾನ್ನ ಸಿಕ್ಕಂತೆ, ನಿಮ್ಮ ಆಗಮನದಿಂದ ಸದ್ಭಕ್ತರಾದ ನಮ್ಮೆಲ್ಲರಿಗೆ ಪರಮಾನಂದವಾಯಿತು. ಸಚ್ಚಿದಾನಂದ ಮೂರ್ತಿಯೇ, ಪರವಾದಿಗಳಿಗೆ ಅಂಜೆವು! ಅಂಜೆವು! ಎನುತ ಎಲ್ಲರು ಶರಣು ಶರಣು ಅನ್ನುತ್ತಿರಲು, ಆವರಿಗೆ ಗುಡ್ಡವ್ವೆಮ್ಮಯು ಅಭಯವನ್ನು ಕೊಟ್ಟಳು. ॥೨೬॥

ಸೂರ್ಯಮಂಡಲಕ್ಕೆ ಗೂಗೆಗಳು ಅಂಜಿ ನಡಗುವಂತೆ ಅಲ್ಲಲ್ಲಿ ಶಿವದ್ರೋಹಿಗಳು ಅಡಗುತ್ತ ಎದೆಯೊಡಕೊಂಡು, ದಿಕ್ಕೆಟ್ಟು ತಳಮಳಿಸುತ ಅಯ್ಯೋ ಈ ವೀರಭಕ್ತ ಶಿವದಳವು ಎಲ್ಲಿಂದ ಎಲ್ಲಿಗೆ ಬಂತು? ಇದರ ಸಂಚಾರವು ಆಶ್ಚರ್ಯಕರವಾದದ್ದು, ಎನ್ನುತ್ತ ದಿಟ್ಟಿಸಿ ನೋಡಿ ಬೆರಗಾಗಿ ಕಳೆಗುಂದಿ ಕಾಲುಬಿಡಲು (ಓಡಲು) ಇದನ್ನು ಗುಡ್ಡವ್ವೆಮ್ಮಯು ನೋಡಿ ನಗುತ್ತಿದ್ದಳು. ॥೨೭॥

ಶರಭವನ್ನು ಕಂಡ ಸಿಂಹಗಳಂತೆಯೂ, ಗರುಡನನ್ನು ಕಂಡ ಹಾವುಗಳಂತೆಯೂ, ಸಿಂಹನನ್ನು ಕಂಡ ಆನೆಗಳಂತೆಯೂ ಗುಡ್ಡವ್ವೆಮ್ಮಯನ್ನು ಕಂಡು

ಪರವಾದಿಗಳು ಬೆದರಿ ತಮ್ಮಷ್ಟಕ್ಕೆ ತಾವೇ ಜರ್ಜರಿತರಾಗಿ ಅಯ್ಯೋ! ಭೂದೇವಿಯು ಬಾಯ್ದೆರೆಯಳೇ? ಎನ್ನುತ್ತ ಎಲ್ಲರೂ ಗುಂಪು ಗುಂಪಾಗಿ ಮರಣ ಬಂತೆಂದು ನಾರಾಯಣನ ಕೂಡ ಓಡುತ್ತಿರಲು ಗುಡ್ಡಮ್ಮೆಯು ನಕ್ಕಳು. ॥೨೮॥

ಏನು ಸ್ವಾಮಿ ನಾಚಯ್ಯಗಳೇ, ನಿಮ್ಮ ಮನದ ಅಭಿಪ್ರಾಯವೇನು? ಮೊದಲು ಲಿಂಗವನ್ನು ಪ್ರತಿಷ್ಠಾಪಿಸುವಿರೊ? ನೀಚರನ್ನು ನಾಶಮಾಡುವಿರೋ? ಎಂದು ಕೇಳಲು ಆಗ್ಗೆ ನಾಚಯ್ಯನು ಲಿಂಗಪ್ರತಿಷ್ಠಾಪನ ಕಾರ್ಯವೇ ಮೊದಲನೇಯದು ಎಂದು ಹೇಳಿದನು. ಆ ಕಾರ್ಯವಾದ ಬಳಿಕ ನೀಚರ ನಾಶವು ಆಗೇ ಆಗುವದೆನ್ನಲು ಗುಡ್ಡಮ್ಮೆಯು ಬ್ರಹ್ಮೇಶ ಲಿಂಗವಿದ್ದ ಮಲಪ್ರಭಾನದಿಗೆ ಹೋಗಲುದ್ಯುಕ್ತಳಾದಳು. ॥೨೯॥

ಶಿವಶರಣರಿಗೆಲ್ಲ ಶರಣು ಮಾಡಿ, ಸದ್ಭಕ್ತರಾದ ನೀವೆಲ್ಲರೂ ಬೇಗನೆ ನಿಮ್ಮ ನಿಮ್ಮ ಮನೆಗಳಿಗೆ ಹೋಗಿ, ಜನರೆಲ್ಲರಿಗೆ ತಿಳಿಯುವಂತೆ ಮನೆಗಳನ್ನು ಗುಡಿ ತೋರಣಗಳಿಂದ ಸಿಂಗರಿಸಿ, ಮಂಗಲ ವಾದ್ಯಗಳೊಡನೆ ಛತ್ರ ಚಾಮರ ಕಲಶ ಕನ್ನಡಿ ರತ್ನಖಚಿತವಾದ ಆರತಿಗಳಿಂದ ಮುತ್ತೈದೆಯರೊಡಗೂಡಿ ಬ್ರಹ್ಮೇಶನ ಎದುರುಗೊಳ್ಳಲು ಬನ್ನಿರೆಂದು ಗುಡ್ಡಮ್ಮೆಯು ಹೇಳಿದಳು. ॥೩೦॥

ಮಂತ್ರವನ್ನುಚ್ಚರಿಸುತ್ತ ತನ್ನ ಪ್ರಮಥಗಣದೊಡನೆ ಗುಡ್ಡಮ್ಮೆಯು ನಡೆದು ನಿರುಪಮ ಬ್ರಹ್ಮೇಶನನ್ನು ಒಳಕೊಂಡ ಮಲಾಪಹಾರಿಯ ತೀರಕ್ಕೆ ಬಂದು, ರಥದಿಂದ ಇಳಿದು, ಮನಸ್ಸಿನಲ್ಲಿ ಈಶ್ವರನನ್ನು ಧ್ಯಾನಿಸಿ, ಸ್ವರ್ಗದಿಂದ ಮನದ ಅಭೀಷ್ಟವಾದವುಗಳನ್ನು ತರಿಸಿ ದೇವದುಂದುಭಿಗಳು ಧ್ವನಿ ಮಾಡುತ್ತಿರಲು, ಆವಳು ದೇವಲೋಕದ ಸ್ತ್ರೀಯರೊಡನೆ ನಿಂತಳು. ॥೩೧॥

ಪರಮೈಶ್ವರ್ಯವುಳ್ಳ ಸರ್ವಮಂಗಳೆಯಾದ ಗುಡ್ಡಮ್ಮೆಯನ್ನು ಗಂಗೆಯು ನೋಡಿ ಓಡಿ ಬಂದು, ಪಾದಕಮಲಗಳನ್ನು ತೊಳೆದು, ರತ್ನ ಖಚಿತವಾದ ಆವುಗೆಗಳನ್ನು ಇಟ್ಟು, ಕೂಡಲೆ ಕೈಹಿಡಿದು ಆ ಬ್ರಹ್ಮೇಶನನ್ನು ತೋರಿಸಲು ಚಂದ್ರನನ್ನು ನೋಡಿದ ಚಂದ್ರಕಾಂತದಂತೆ ಗುಡ್ಡಮ್ಮೆಯು ಆ ಲಿಂಗವನ್ನು ನೋಡಿ ಆನಂದಾಶ್ರುಗಳನ್ನು ಸುರಿಸಿದಳು. ॥೩೨॥

ವಸಂತನನ್ನು ನೋಡಿದ ವನದೇವಿಯ ಹಾಗೆ ಪುಳಕಾಂಕುರೆಯಾಗಿ ಅಮೃತ ಸಮುದ್ರದಲ್ಲಿ ಮುಳುಗೆದ್ದ ಶರೀರದಂತೆ ನಡಗುವ ಶರೀರಿಯಾಗಿ ಮಲಯಾನಿಲನಿಂದ ಚಲಿಸುವ ಚಂದನ ಲತೆಯಂತೆ ಕಂಪಿತೆಯಾಗಿ,

ಚಂದನಲತಾ ಕಂಪನ ಧ್ವನಿಯೊಡನೆ ಹಾಡುವ ಹೆಣ್ಣುದುಂಬಿಯಂತೆ ಹಾಡುವವಳಾಗಿ, ಗುಡ್ಡಮ್ಮಯು "ಪರಬ್ರಹ್ಮ ಓಯ" ಎಂದಳು. ॥೩೩॥

ಕೂಡಲೆ ಪ್ರೀತಿಯಿಂದ ದಂಡವತ್ ಸಾಷ್ಟಾಂಗ ನಮಸ್ಕಾರ ಮಾಡಿ ಕೈಜೋಡಿಸಿ ಎದ್ದು, ಸ್ವರ್ಗಲೋಕದಿಂದ ಕಾಮಧೇನು ಕಲ್ಪವೃಕ್ಷಗಳನ್ನು ತರಿಸಿ, ಆ ವೃಕ್ಷಗಳ ಹಣ್ಣಿನ ರಸದಿಂದ ಅಭಿಷೇಕ ಮಾಡಿ, ಪರಿಮಳಗಂಧಾಕ್ಷತೆಗಳನ್ನು ಧರಿಸಿ, ಅರಳುವ ಮಂದಾರ ಪುಷ್ಪಮಾಲೆಯನ್ನು ಹಾಕಿ, ಗುಡ್ಡಮ್ಮಯು ಬ್ರಹ್ಮೇಶನನ್ನು ಕೊಂಡಾಡಿದಳು. ॥೩೪॥

ಬ್ರಹ್ಮೇಶನಿಗೆ ಗಂಧವನ್ನು ಪೂಸಿ, ಧೂಪಬೀಸಿ, ರತ್ನದ ಆರತಿಯನೆತ್ತಲು ಅದರ ಕಾಂತಿಯು ಎಲ್ಲ ಕಡೆಗೆ ವ್ಯಾಪಿಸಲು, ಭಕ್ತಿರಸವುಳ್ಳ ಪರಾನಂದವೆಂಬ ನೈವೇದ್ಯವನ್ನು ಸಮರ್ಪಿಸಿ, ಕರ್ಪೂರ ತಾಂಬೂಲವಿಟ್ಟು ಉಪಚರಿಸಿ, ಘನಸುಖದಿಂದ ನಿತ್ಯನಾಗೆಂದು ಹರಿಸಿ ಗುಡ್ಡಮ್ಮಯು ಶೇಷಕ್ಕೆಯನಿಟ್ಟಳು. ॥೩೫॥

ಸರ್ವಾಧಾರನಾದ ಸರ್ವೇಶನಾದ ಸರ್ವಜ್ಞನಾದ ದೇವರೇ? ನೀವು ಇಲ್ಲಿ ವಿನಾಕಾರಣ ಪ್ರವಾಸದೊಳಿರುವದೇಕೆ? ದಯವಿಟ್ಟು ಸ್ವಸ್ಥಾನಕ್ಕೆ ಆಗಮಿಸಿ ಭಕ್ತರ ಅಭೀಷ್ಟವನ್ನು ಪೂರೈಸುವ ಕಾರ್ಯವನ್ನು ಲಕ್ಷೀಕರಿಸಬೇಕು ಎಂದು ಲಿಂಗವನ್ನು ಪ್ರೀತಿಸಿ ಹಿಡಿದು ಪುಷ್ಪಕ ವಿಮಾನದಲ್ಲಿ ಮುಹೂರ್ತಗೊಳಿಸಿ, ಗುಡ್ಡಮ್ಮಯು ಅಲಂಪುರಕ್ಕೆ ಬರುತ್ತಿದ್ದಳು. ॥೩೬॥

ಬರುವಾಗ್ಗೆ ಬ್ರಹ್ಮೇಶನ ಎಲ್ಲ ಲೀಲೆಗಳ ಬಿರುದಾವಳಿಗಳನ್ನು ಉಗ್ಗಡಿಸಲು, ಹಂಸ ಪಕ್ಷಿಗಳು ಮೇಘ ಗರ್ಜನೆಗೆ ಹೆದರಿ ಭೂಮಿಗೆ ಎರಗುವಂತೆ ನಿಂದಕರು ಆ ಧ್ವನಿಯನ್ನು ಕೇಳಿ ತನ್ನ ಪಾದಕಮಲಕ್ಕೆರಗಿ ಶರಣು ಹೋಗಲು ಅವರನ್ನು ಸಲಹುತ್ತ ವಿರೋಧಿಗಳನ್ನು ಚಂಡಾಡುತ್ತ ಗುಡ್ಡಮ್ಮಯು ಬಂದಳು. ॥೩೭॥

ನಿಶ್ಚಲ ಮನಸ್ಸಿನಿಂದ ಗುಡ್ಡಮ್ಮಯು ಪಾದಕಮಲವನ್ನು ನೆನಿಸುತ್ತ ಉಕ್ಕುವ ಭಕ್ತಿರಸದಿಂದ ಬಹಳ ಸಡಗರದೊಡನೆ ಆ ಪಟ್ಟಣದ ಪಶ್ಚಿಮ ಗೋಪುರದಲ್ಲಿ ಎಲ್ಲ ಭಕ್ತ ಸಮೂಹವು ಕೂಡಿ ಉಗ್ಗಡಿಸಲು, ಶಿವಲೋಕವೇ ಇಲ್ಲಿ ಬಂದಂತೆ ಗುಡ್ಡಮ್ಮಯು ಸಂತೋಷದಿಂದ ಶಿವಗಣದ ಮುಂದೆ ನಿಂತಳು. ॥೩೮॥

ವೀರ ಭಕ್ತಿ ಸಾಮ್ರಾಜ್ಯವು ಸಿದ್ಧಿಸಲಿ, ಸರ್ವಾರೋಗ್ಯವಾಗಲಿ, ಶುಭವಾಗಲಿ, ಶಿವವ್ರತವು ಹಬ್ಬಲಿ, ಶಿವಜೀವೈಕ್ಯವಾಗಲಿ, ಎಂದೆನುತ ಮುತ್ತೈ

ದೆಯರು ಆರತಿಯನೆತ್ತಿ ಕೊಂಡಾಡುತ್ತಿರಲು ವೀರ ಮಾಹೇಶ್ವರರಾದ ಹದಿನಾರು ಜನ ವೀರಗಣಂಗಳಿಗೆ ವೀರಕಂಕಣವನ್ನು ಕಟ್ಟಿದಳು. ॥೩೯॥

ಪಾರ್ವತಿಯು ಹದಿನಾರು ಕಲೆಗಳಿಂದ ಕೂಡಿದವಳೆಂದು ಈಶ್ವರನು ಹದಿನಾರು ಕಲೆಗಳಿಗೆ ಅಪ್ಪಣೆಕೊಟ್ಟು ಹದಿನಾರು ಜನ ವೀರಗಣಂಗಳಾಗಿರೆಂದು ಆ ಹೊತ್ತು ಅನುಜ್ಞೆಯನಿತ್ತು ಕಳುಹಲು, ಈಗ ಮೃತ್ಯುಲೋಕದಲ್ಲಿ ಹದಿನಾರು ಬೇರೆ ಬೇರೆ ಹೆಸರಿನಿಂದ ನೀವೇ ವೀರಗಣಂಗಳಾಗಿರುವಿರಿ ತಾವು ಇತರರಲ್ಲ, ಎಂದು ನಾಚಯ್ಯನು ಶರಣಾರ್ಥಿಯೆನ್ನಲು ಗುಡ್ಡಮ್ಮೆಯು ಆನಂದ ಭರಿತಳಾದಳು ॥೪೦॥

ಎಲೌ ದೇವಿಯೇ ಜಗನ್ಮಾತೆಯೇ, ನಿನ್ನ ಕಳೆಗಳನ್ನು ಬಲ್ಲ ಮಹಾನುಭಾವರಾರು? ನಿನ್ನ ಈ ರೂಪು, ಈ ತಾರಣ್ಯ, ಈ ಹಾವಭಾವ, ಈ ಲೀಲೆ, ಈ ಮೋಹಕತ್ವಗಳನ್ನು ತಿಳಿಯಲು ಮನುಷ್ಯರಿಗಳವೇ? ಅಲ್ಲಲ್ಲ! ಯಾವಾಗಲೂ ಕಣ್ತುಂಬ ನೋಡಿದರೂ ತೃಪ್ತಿಯಾಗದು, ಅಂಥ ಮಹಿಮೆಯುಳ್ಳವಳು ನೀನು ಕಂಡಿಯಾ! ಈ ರೀತಿಯನ್ನು ತಿಳಿಯಲು ವಿಶ್ವತಜ್ಞಶ್ರೇಷ್ಠನಾದ ಆ ಬ್ರಹ್ಮೇಶನೇ ಯೋಗ್ಯನೆಂದು ನಾಚಿದೇವನು ಗುಡ್ಡಮ್ಮೆಗೆ ನಮಸ್ಕರಿಸಿದನು. ॥೪೧॥

ಸಾಮಾನ್ಯ ಜನರು ನೋಡಿ ಚಕಿತರಾಗುತ್ತಿರಲು, ಒನ್ನಿಂದೊನ್ನೆ ಸ್ವರ್ಗಲೋಕದಿಂದ ಒಂದು ಚಂದ್ರಕಾಂತ ವಿಮಾನವನ್ನು ತರಿಸಿ, ದೇವಲೋಕದ ಎಲ್ಲ ವೈಭವಗಳನ್ನು ಅದರ ಸುತ್ತಲು ನಿಲ್ಲಿಸುತ್ತ, ಜಗದೀಶನಾದ ಆ ಬ್ರಹ್ಮೇಶಲಿಂಗ ಮೂರ್ತಿಯನ್ನು ಯಾವಾಗಲೂ ಕಾಯಲಿಕ್ಕೆ ಹೇಳಿ, ಆ ಗುಡ್ಡಮ್ಮೆಯು ಶಿವದ್ರೋಹಿಗಳಾದ ಆ ನೀಚರಿದ್ದೆಡೆಗೆ ಹೋದಳು. ॥೪೨॥

ಸಿಡಿಲಿನ ಬೆಳಕೋ? ಸಮುದ್ರ ಮಥನಕಾಲಕೆ ಹುಟ್ಟಿದ ಕಾಳಕೂಟ ವಿಷದ ರಭಸವೋ? ತ್ರಿಪುರ ಸಂಹಾರ ಕಾಲದ ರುದ್ರನ ಉರಿಗಣ್ಣಿನಿಂದ ಹುಟ್ಟಿದ ಅಗ್ನಿಯ ವೇಗವೋ? ಉಪಮಿಸಲು ಸರಿಯಿಲ್ಲದ ನಿನ್ನ ಆರ್ಭಟವು ಭೂಲೋಕಕ್ಕೆ ಆಶ್ಚರ್ಯವನ್ನುಂಟು ಮಾಡುವದು, ಎಂದು ಸೈನ್ಯವು ಸೈ ಸೈ ಎನ್ನುತ್ತಿರಲು ನಾಚಯ್ಯನು ಗುಡ್ಡಮ್ಮ ಮೊದಲಾದ ಹದಿನಾರು ಜನ ವೀರಗಣಂಗಳನ್ನು ಹೊಗಳಿದನು. ॥೪೩॥

ಹದಿನಾರು ದಿಕ್ಕಿನಲ್ಲಿ ಹದಿನಾರು ರಥಿಕರನ್ನು ಚದುರಂಗ ಬಲದೊಡನೆ ನಿಲ್ಲಿಸಿ ತಾನೊಬ್ಬಳೇ ಕಾಮಹರನಾದ ಬ್ರಹ್ಮೇಶ ಲಿಂಗ ಪೀಠವನ್ನು ನೋಡಲಿಕ್ಕೆ ತೀವ್ರದಿಂದ ಹೋಗುವಾಗ್ಗೆ, ಎದೆ ಸೀಳಿ ನಾರಾಯಣ

ಮೂರ್ತಿಯು ಅಧಿಕವಾಗಿ ಸಿಡಿದು ಹಾರಲು ದೂಷಕರು ಕಂಡು ನಿರುತ್ಸಾಹಿಗಳಾಗಿ ನಡುಗುತ್ತಿರಲು ಗುಡ್ಡಮ್ಮೆಯು ನಗುತ್ತಿದ್ದಳು. ॥೪೪॥

ಸೂರ್ಯೋದಯ ಮಾತ್ರದಿಂದ ಕತ್ತಲೆಯು ಅಳಿಯುವಂತೆ, ಗುಡ್ಡಮ್ಮೆಯ ದರ್ಶನದಿಂದ ಕರ್ಮಗಳಿಂದ ಭ್ರಮಿತರಾದ ದೂಷಕರ ಹೃದ್ಗತ ಅಜ್ಞಾನಾಂಧಕಾರವು ಅಳಿದು, ಪ್ರೇಮದಿಂದ ಅವರ ಪಾದಕ್ಕೆರಗಿ ನಮ್ಮನ್ನು ಉದ್ಧರಿಸೆಂದು ಬಿನ್ನವಿಸಲು ಆಗ ಆ ಜಗಜ್ಜನನಿಯು ಅವರಿಗೆ ಶಿವಧರ್ಮೋಪದೇಶವನ್ನಿತ್ತಳು. ॥೪೫॥

ಮಲಗಿದಾಗ ಕೆಟ್ಟ ಸ್ವಪ್ನವನ್ನು ನೋಡಿ ಬೆರಗಾಗಿ ದೋಷ ಪರಿಹಾರಾರ್ಥವಾಗಿ, ಹಲವು ತರದ ಜಪ ಹೋಮ ಪೂಜಾದಿಗಳಿಂದ ಶಾಂತಿಯನ್ನು ಮಾಡುವಂತೆ ಗುಡ್ಡಮ್ಮೆಯ ಶಿಷ್ಯರು ತಮಗೆ ಮರಹಿನಿಂದುಂಟಾದ ದುಷ್ಕರ್ಮ ಪರಿಹಾರಾರ್ಥವಾಗಿ ಉಗ್ರವಾದ ಜಪಹೋಮಾದಿಗಳನ್ನು ಮಾಡುವೆವೆಂದು ಹೇಳಿದರು. ॥೪೬॥

ಕಟ್ಟಿದ ಗುಡಿತೋರಣಗಳಿಂದ, ತುಂಬಿದ ಧೂಪಾರತಿ ಕಲಶ ಕನ್ನಡಿಗಳಿಂದ, ಶಿವಾಲಯವನ್ನು ಸಿಂಗರಿಸಿದ ಹೂವುಗಳಿಂದ ಜಗಚ್ಚಕ್ಷುವಾದ ಬ್ರಹ್ಮೇಶನಿಗೆ ನೀವು ನಿಮ್ಮ ಬಂಧುಗಳೊಡನೆ ಮಂಗಲ ಕಾರ್ಯವನ್ನು ಮಾಡಿ ಬಳಿಕ ಜಪಹೋಮಾದಿಗಳ ಕೆಲಸಕ್ಕೆ ಬನ್ನಿರೆಂದು ಶಿಷ್ಯರಿಗೆ ಗುಡ್ಡಮ್ಮೆಯು ಹೇಳಿದಳು. ॥೪೭॥

ಶಿವಭಕ್ತರಿಗೆ ವಿಷವು ಅಮೃತವಾಗದೆ ಇರುವದೇ? ಶಿವಭಕ್ತರು ನಾಯಿಯಿಂದ ವೇದವನ್ನು ಓದಿಸದೆ ಇರುವರೇ? ಹಸಿ ಆರಿದ ಸ್ಥಳದಲ್ಲಿ ಹೊಟ್ಟಗಳೆದ ಧಾನ್ಯವನ್ನು ಬಿತ್ತಿ. ಬೆಳೆಯದೆ ಇರುವರೇ? ಮೃತರನೆಬ್ಬಿಸಿ ಮಾತಾಡಿಸದೆ ಇರುವರೇ? ವೇಷಧಾರಿಗಳನ್ನು ಸಹ ನಿಜವಾದ ಸ್ವರೂಪಿಗಳನ್ನಾಗಿ ಮಾಡರೇ? ಈ ಮಹತ್ಕೃತ್ಯವು ಈಶಾನುಗ್ರಹವುಳ್ಳವರಿಗೆ ಅರಿದಲ್ಲ ಎಂದು ವೀರನಾಚಯ್ಯಗಳು ಸಾರಿದರು. ॥೪೮॥

ಗುಡ್ಡಮ್ಮೆಯು ತನ್ನ ನಿತ್ಯವಾದ ವರಕರುಣ ಪ್ರಸಾದದಿಂದ ಶರಣು ಬಂದ ಶಿಷ್ಯರ ಅಂತರಿಂದ್ರಿಯಗಳು ಅರ್ಧಶುದ್ಧವಾಗಿ, ಅವರಲ್ಲಿ ಶಾಂತಿ ರಸವು ಮೊಳೆದೋರಲು ದುಷ್ಕರ್ಮವು ತೊಲಗುವದೆಂದು ತಿಳಿದು (ಉಳಿದ ಅರ್ಧ ಶುದ್ಧಿಗಾಗಿ) ದೀಕ್ಷೆ ಕೊಡಿಸುವದಕ್ಕಾಗಿ ವೇದಾಗಮಾಚರಣೆಯುಳ್ಳ ಮಂತ್ರ ತಂತ್ರವುಳ್ಳ ಹೋಮಾರ್ಚನಾ ನಿರತರಾದ ವೈದಿಕ ವಿಶಿಷ್ಟರನ್ನು ಕರಿಸಿದಳು. ॥೪೯॥

4

ಅವರನ್ನು ಕರೆಯಿಸಿ ಶಿವಸಭೆಯಲ್ಲಿ ಕುಳ್ಳಿರಿಸಿ, ಶಿಷ್ಯ ಸಮೂಹವು ಸಭೆಗೆ ಎದುರಾಗಿ ಕೈಜೋಡಿಸಿ ನಿಂತು ಪೂರ್ವವೃತ್ತಾಂತವನ್ನು ಪರ್ಯಾಯದಿಂದ ಹೇಳಲು, ಹಿರಿಯರೆಲ್ಲರು ಅವರಿಗೆ ಆ ದೋಷ ಪರಿಹಾರಾರ್ಥ ವಿಧಿವಿಧಾನಗಳನ್ನು ಮಾಡಬೇಕೆನ್ನಲು ಅವರು ಅವುಗಳನ್ನು ಕೈಕೊಂಡು ಹತ್ತು ಸಾವಿರ ಹೊನ್ನುಗಳನ್ನು ಗುಡ್ಡಮ್ಮಗೆ ಅರ್ಪಿಸಿದರು. ॥೫೦॥

ಬ್ರಾಹ್ಮಣ ಶಿಷ್ಯವೃಂದವು ದಿನದಿನಕ್ಕೆ ಹೆಚ್ಚುತ್ತ ಸಂತೋಷಭರಿತರಾಗಿ ಎಲ್ಲ ವಿಧದ ಮಂಗಳ ಕಾರ್ಯಗಳನ್ನು ಪೂರೈಸಿ, ತಮ್ಮ ತಮ್ಮ ಮನೆಗಳನ್ನೂ ಪಟ್ಟಣದ ರಾಜಮಾರ್ಗಗಳನ್ನೂ ಸಾರಣೆಗಳಿಂದಲೂ ರಂಗವಲ್ಲಿಗಳಿಂದಲೂ ಹಲವು ತರ ಧ್ವಜಪತಾಕೆಗಳಿಂದಲೂ ಶೃಂಗರಿಸಿದ್ದಲ್ಲದೆ ಬ್ರಹ್ಮೇಶನ ಗುಡಿಯನ್ನು ವಿಚಿತ್ರತರವಾಗಿ ಅಲಂಕರಿಸಿದರು. ॥೫೧॥

ಕಪ್ಪಾದ ಮೋಡದ ಹಸಿಗಳಿಗೆ, ಚಾತಕಗಳು ಪೂಮಕರಂದಕ್ಕೆ ಭ್ರಮರ ಸಮೂಹವು, ನೀಲೋತ್ಪಲಕ್ಕೆ ಚಂದ್ರನ ಕಿರಣಗಳ, ಫಲಭರಿತವಾದ ನಂದನವನಕ್ಕೆ ಗಿಳಿಕೋಗಿಲೆಗಳು ಹಾರಿಹೋಗುವಂತೆ ಕ್ರಮದಿಂದ ಪುರಜನರೂ ಸೇವಕರೂ ಗುಡ್ಡಮ್ಮಯು ಕಾರುಣ್ಯಾಸ್ಪದರಾದ ಶಿಷ್ಯರೂ ಸಹಿತವಾಗಿ ವೀರನಾಚಯ್ಯನು ಬ್ರಹ್ಮೇಶನ ದೇವಾಲಯಕ್ಕೆ ಹೋದನು॥೫೨॥

ಆಗ ಬ್ರಹ್ಮೇಶ ಲಿಂಗವನ್ನು ವೀರನಾಚಯ್ಯನೂ ಹದಿನಾರು ಜನ ವೀರಗಣಂಗಳೂ ನೋಡಿ ನಮಿಸುತ್ತ ಭೋ, ಕಾರುಣ್ಯ ನಿಧಿಯೇ; ನಿನಗೆ ಜಯ ಜಯುವಿರಲಿ! ಹೇ ತಂದೆಯೇ, ಲೋಕೋದ್ಧಾರಕನೇ! ನಿನ್ನ ನಿಜ ಭುವನವನ್ನು ಅಲಂಕರಿಸು ಎಂದು ಗುಡ್ಡಮ್ಮ ಮೊದಲಾದವರು ಆ ಲಿಂಗವನ್ನು ಪುಷ್ಪಕ ವಿಮಾನಕ್ಕೆ ತಂದರು. ॥೫೩॥

ತರುವಾಯ ಗರ್ಜಿಸುವ ವಾದ್ಯ ವಿಶೇಷಂಗಳ, ಧ್ವನಿಗೈವ ಶಂಖಕಹಳೆಗಳ, ಉಚ್ಚರಿಸುವ ಮಂಗಳಪಾಠಕರ, ನೃತ್ಯಗೀತಂಗಳನ್ನು ಗೈವ ದೇವಸ್ತ್ರೀಯರ ಸುವಾಸಿಸುವ ಧೂಪದ, ವರ್ಷಿಸುವ ಹೂವುಗಳ ಸಂಭ್ರಮದೊಡನೆ ಎಲ್ಲ ವೀರಗಣರೂ ಗುಡ್ಡಮ್ಮಯೂ ಹೊರಟರು. ॥೫೪॥

ಕೆಲಕೆಲವೆಡೆ ಛತ್ರಚಾಮರಗಳಿಂದಲೂ ತರತರದ ತೋರಣಗಳಿಂದಲೂ ನಂದಿಯ ಧ್ವಜದಿಂದಲೂ ಹಲವು ಪ್ರಕಾರದ ಮಂಗಳ ವಾದ್ಯಗಳಿಂದಲೂ ಆ ಪಟ್ಟಣದ ಜನರು ವೀರಗಣದೊಡನೆ ಇರುವ ಗುಡ್ಡಮ್ಮಯು ಸಹಿತ ಬ್ರಹ್ಮೇಶನ ಗುಡಿಯನ್ನು ಹೊಕ್ಕು ನಾನಾ ತರದ ಮಹೋತ್ಸವಗ

ಳಿಂದ ಪಂಚಾಮೃತಾಭಿಷೇಕ ಮಾಡಿ ಹರನನ್ನು ಹರಿ ಪೀಠದೊಳು ನಿಲ್ಲಿಸಿದಳು. ॥೫೫॥

ಹದಿನಾರು ಜನ ವೀರಗಣಂಗಳ ಗುಪ್ತವಾದ ವೀರತ್ವವನ್ನು ಭೂಲೋಕಕ್ಕೆ ತೋರಿಸಿ ಮರೆಯುವೆನೆಂದು ಉದಾರನೂ ಧೀರನೂ ಆದ ಬ್ರಹ್ಮೇಶನು ಪೀಠವಲ್ಲಿ ನಿಲ್ಲದಿರಲು, ಆಗ ಆ ಹದಿನಾರು ಜನ ವೀರಪ್ರಮಥರು ವ್ಯವಸ್ಥೆಯಿಂದ ನಿಂತುಕೊಂಡು ಕ್ರಮದಿಂದ ಮನಃಪೂರ್ವಕವಾಗಿಶಸ್ತ್ರಗಳಿಂದ ತಮ್ಮ ತಮ್ಮ ಶಿರಃ ಕಮಲಗಳನ್ನು ಛೇದಿಸಿ ಶಿವನಿಗರ್ಪಿಸಲು ಶಂಕರನು ಮೆಚ್ಚಿ ಅವರಿಗೆ ವರವನ್ನು ಕೊಟ್ಟನು. ॥೫೬॥

ವೀರವ್ರತಾಚಾರ ನಿಷ್ಠಾ ಭಕ್ತಿಗಳುಳ್ಳ ಗುಡ್ಡಮ್ಮ ಮೊದಲಾದ ಹದಿನಾರು ಜನ ವೀರಶೈವರ ಚರಿತ್ರವನ್ನು ಆನಂದದಿಂದಲೂ ಪ್ರೀತಿ ವಿಶ್ವಾಸಗಳಿಂದಲೂ ಕೇಳುವವರಿಗೆ ಸರಿಯಿಲ್ಲದ ಐಶ್ವರ್ಯ ಆರೋಗ್ಯ ಆಯುಷ್ಯ ಸುಜ್ಞಾನ ಸದ್ಭಕ್ತಿಗಳ ಉಂಟಾಗಿ ಅವರು ಪರಶಿವನಲ್ಲಿ ಐಕ್ಯರಾಗುವರು. ॥೫೭॥

## ಶಿವಾನುಭವ ಗ್ರಂಥಮಾಲೆಯ ಪುಸ್ತಕಗಳು

| | | |
|---|---|---|
| ೧ | ಬಸವೇಶ್ವರ ವಚನಗಳು | ೧। ರೂ. |
| ೨ | ಮಹಿಮ್ನ ಸ್ತೋತ್ರ | ೪ ಆ. |
| ೩ | ಮಹಾದೇವಿಅಕ್ಕನ ವಚನ | ೬ ಆ. |
| ೪ | ಲಿಂಗಪೂಜೆಯ ತತ್ವಗಳು | ೨ ಆ. |
| ೫ | ವೀರಶೈವ ರಗಳೆ | ೨ ಆ. |
| ೬ | ತೋಂಟದಾರ್ಯರ ರಗಳೆ | ೨ ಆ. |
| ೭ | ಶಿವಯೋಗಾಚರಣೆ | ೧ ಆ. |
| ೮ | ವರದಾನಿಗುಡ್ಡಮ್ಮನ ಚರಿತ್ರೆ | ೩ ಆ. |
| ೯ | ಗಣದಾಸಿವೀರಣ್ಣನ ವಚನ | ೪ ಆ. |
| ೧೦ | ಸಂಗನಬಸವೇಶ್ವರ ವಚನಗಳು | ೧೦ ಆ. |
| ೧೧ | ನೈತಿಕ ಮತ್ತು ಭಕ್ತಿಯ ವಚನ | ೧೨ ಆ. |
| ೧೨ | ಲಿಂಗ ಮತ್ತು ಪರಮಾತ್ಮ | ೧೨ ಆ. |
| ೧೩ | ಘನಲಿಂಗನ ವಚನ | ೬ ಆ. |
| ೧೪ | ಏಕೋತ್ತರ ಶತಸ್ಥಲ | ೧। ರೂ. |
| ೧೫ | ದೇವರ ದಾಸಿಮಯ್ಯನ ವಚನ | ೧೦ ಆ. |
| ೧೬ | ಹಡಪದಪ್ಪಣ್ಣನ ವಚನ | ೬ ಆ. |
| ೧೭ | ಲಿಂಗಮ್ಮನ ವಚನ | ೩ ಆ. |
| ೧೮ | ಲಿಂಗಾಯತ ಮತತತ್ವ | ೪ ಆ. |
| ೧೯ | ಮೈಲಾರ ಬಸಪ್ಪನವರ ದರ್ಪಣ | ೮ ಆ. |
| ೨೦ | ಸಕಲೇಶ ಮಾದರಸನ ವಚನ | ೩ ಆ. |
| ೨೧ | ಕೈ. ವಾ. ಚನ್ನಬಸಪ್ಪ ಬಸಲಿಂಗಪ್ಪ ಧಾರವಾಡ ಇವರ ಚರಿತ್ರೆ. | ೪ ಆ. |

**ವಿಳಾಸ—ಹಿತಚಿಂತಕ ಪ್ರಿಂಟಿಂಗ ಪ್ರೆಸ್ ವಿಜಾಪುರ**